ವಿಜಯಪುರ । ಸಂಪುಟ 04 । ಸಂಚಿಕೆ 246 । ಪುಟ 04 । ₹ 3.00

https://udayarashminews.com

udayarashmi 90088 88340

ಉದಯರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಬುಧವಾರ, ನವೆಂಬರ್ 25, 2026



"ಆಶಾ ಕಾರ್ಯಕರ್ತೆಯರ ಬಗ್ಗೆ ವಿಶೇಷ ಕಾಳಜಿಯಿದೆ. ನಿಮ್ಮ ಸಮಸ್ಯೆಗಳನ್ನು ನಾವು ಖಂಡಿತವಾಗಿಯೂ ಪರಿಹರಿಸುತ್ತೇವೆ. ದಯವಿಟ್ಟು ಪ್ರತಿಭಟನೆಯನ್ನು ಕೈಬಿಡಿ.

■ ಡಿಕೆ ಶಿವಕುಮಾರ, ಮುಖ್ಯಮಂತ್ರಿಗಳ



ಸಾರಂಗಮಠದಲ್ಲಿ ಭಕ್ತಿಭಾವದ ಹೆಡಿಗೆ ಜಾತ್ರೆ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ತಾಲೂಕಿನ ಬ್ಯಾಕೋಡ ಗ್ರಾಮದ ತಾಯಂದಿರು ಗುಡ್ಡಾಪುರ ದಾನಮ್ಮತಾಯಿಯ ಪುರಾಣದ ನಿಮಿತ್ಯ ತಮ್ಮ ಮನೆಗಳಲ್ಲಿ ಭಕ್ತಿಯಿಂದ ಸಿದ್ಧಪಡಿಸಿದ ವಿವಿಧ ಬಗೆಯ ಪ್ರಸಾದವನ್ನು ಹೆಡಿಗೆ (ಬುಟ್ಟಿ) ಗಳಲ್ಲಿ ಹೊತ್ತು ಸಿಂದಗಿಯ ಶ್ರೀ ಸಾರಂಗಮಠಕ್ಕೆ ಆಗಮಿಸಿ ಸಮರ್ಪಿಸಿದರು. ಬಳಿಕ ಮಠದಲ್ಲಿ ಸಮಾವೇಶಗೊಂಡ ಭಕ್ತರು ಹಾಗೂ ಸಾರ್ವಜನಿಕರಿಗೆ ಪ್ರಸಾದ ದಾಸೋಹ ನೆರವೇರಿಸುವ ಮೂಲಕ ಧಾರ್ಮಿಕ ಸೇವೆಯಲ್ಲಿ ಭಾಗಿಯಾದರು.

ಮನೆಯಿಂದ ಸಿದ್ಧಪಡಿಸಿ ತಂದ ಆಹಾರವನ್ನು ಸಾಮೂಹಿಕವಾಗಿ ಹಂಚಿಕೊಂಡು ಎಲ್ಲರೂ ಒಟ್ಟಾಗಿ ಪ್ರಸಾದಸ್ವೀಕರಿಸುವಈಸಂಪ್ರದಾಯವುಭಕ್ತಿ,ಭಾವೈಕ್ಯತೆ, ಪರಸ್ಪರ ಪ್ರೀತಿ ಹಾಗೂ ಸಹಬಾಳ್ವೆಯ ಸಂದೇಶ ಸಾರಿತು. ತಾಯಂದಿರ ಭಕ್ತಿಪೂರ್ವಕ ಸೇವೆ ಹಾಗೂ ದಾಸೋಹ ಕಾರ್ಯ ಭಕ್ತರ ಮೆಚ್ಚುಗೆಗೆ ಪಾತ್ರವಾಯಿತು.

ಈ ವೇಳೆ ಸಾರಂಗಮಠ-ಗಚ್ಚಿನಮಠದ ಪೀಠಾಧೀಪತಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಸಾನ್ನಿಧ್ಯ ವಹಿಸಿದ್ದರು. ಉತ್ತರಾಧಿಕಾರಿಗಳಾದ ಡಾ.ವಿಶ್ವಪ್ರಭುದೇವ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು. ಮಹಾರಾಷ್ಟ್ರದ ಗಡಹಿಂಗ್ಲಜ ತಾಲೂಕಿನ ನೂಲ ಗ್ರಾಮದ ಗುರುಸಿದ್ದೇಶ್ವರ ಶಿವಾಚಾರ್ಯರು ಗುಡ್ಡಾಪುರ ದಾನಮ್ಮತಾಯಿ ಕುರಿತು ಪುರಾಣ ಪ್ರವಚನ ನೀಡಿದರು. ಸಿಂದಗಿ ಆದಿಶೇಷಮಠದ ನಾಗರತ್ನ ರಾಜಯೋಗಿ ವೀರರಾಜೇಂದ್ರ ಸ್ವಾಮೀಜಿಗಳು, ಸಂಗೀತಗಾರ ನಾಗಭೂಷಣ ಶಿವರುದ್ರಯ್ಯ ಕಲಬುರ್ಗಿಮಠ, ತಬಲಾ ವಾದಕ ಸಿದ್ಧರಾಮ ಬ್ಯಾಕೋಡ ಸೇರಿದಂತೆ ಶ್ರೀಮಠದ ಭಕ್ತರು ಇದ್ದರು.



ವಿಜಯಪುರ: ಪಾಲಿಕೆ ವತಿಯಿಂದ ನಗರದಲ್ಲಿ ಅತಿಕ್ರಮಣ ತೆರವು ಕಾರ್ಯಾಚರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ:ನಗರದರಸ್ತೆಹಾಗೂಸಾರ್ವಜನಿಕ ಜಾಗಗಳನ್ನು ಒತ್ತುವರಿ ಮಾಡಿ ನಿರ್ಮಿಸಲಾಗಿದ್ದ ಕಟ್ಟಡಗಳ ಅನಧಿಕೃತ ಭಾಗಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಮಹಾನಗರ ಪಾಲಿಕೆ ವತಿಯಿಂದ ನ.23 ಮತ್ತು 24ರಂದು ನಡೆಸಲಾಗಿದ್ದು, ಎರಡು ದಿನಗಳಲ್ಲಿ ಒಟ್ಟು 79 ಕಟ್ಟಡಗಳ ಅತಿಕ್ರಮಿತ ಭಾಗಗಳನ್ನು ತೆರವುಗೊಳಿಸಲಾಗಿದೆ ಎಂದುಪಾಲಿಕೆಆಯುಕ್ತವಿಜಯಮೆಕ್ಕಳಕಿತಿಳಿಸಿದ್ದಾರೆ.

ನಗರದ ವಾರ್ಡ್ ಸಂಖ್ಯೆ 27, 28 ಹಾಗೂ 30ರ ವ್ಯಾಪ್ತಿಯ ಖಾದಿ ಗ್ರಾಮೋದ್ಯೋಗದಿಂದ ಅಲಿಖಾ ರೋಜಾ ಸ್ಮಾರಕದ ಮಾರ್ಗ, ಅಥ-'ಣಿ ಗಲ್ಲಿ, ಸಕಾಫ್ ರೋಜಾ ಹಾಗೂ ಖಾಸಗೇರಿ ಓಣಿಗಳಲ್ಲಿ ಸಾರ್ವಜನಿಕ ರಸ್ತೆ ಮತ್ತು ಸರ್ಕಾರಿ ಜಾಗವನ್ನು ಅತಿಕ್ರಮಿಸಿ ಕಟ್ಟಡಗಳ ಭಾಗಗಳನ್ನು ನಿರ್ಮಿಸಲಾಗಿತ್ತು. ಇವುಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಪೊಲೀಸ್ ಇಲಾಖೆಯ ಭದ್ರತೆಯೊಂದಿಗೆ ಕೈಗೊಳ್ಳಲಾಯಿತು.

ಮಹಾತ್ಮಾಗಾಂಧಿನಗರವಿಕಾಸಯೋಜನೆಯಡಿ ವಿಜಯಪುರ ಮಹಾನಗರ ಪಾಲಿಕೆಗೆ ಈಗಾಗಲೇ 150 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಈ ಅನುದಾನದಡಿ ನಗರದ ವಿವಿಧ ಮೂಲಸೌಕರ್ಯ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ನಗರದ ವಿವಿಧ ವಾರ್ಡ್ಗಳ ರಸ್ತೆಗಳನ್ನು ಉನ್ನತೀಕರಿಸುವುದು ಹಾಗೂ ಅಗತ್ಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದು ಅವಶ್ಯಕವಾಗಿದೆ.

ಈ ಹಿನ್ನೆಲೆಯಲ್ಲಿ ರಸ್ತೆ ಹಾಗೂ ಸಾರ್ವಜನಿಕ ಜಾಗಗಳನ್ನು ಅತಿಕ್ರಮಿಸಿ ಕಟ್ಟಡ ನಿರ್ಮಿಸಿರುವ ವಾರ್ಡ್ ಸಂಖ್ಯೆ 27, 28 ಮತ್ತು 30ರ ವ್ಯಾಪ್ತಿಯ ಸುಮಾರು 79 ಅತಿಕ್ರಮಣದಾರರಿಗೆ, ಅತಿಕ್ರಮಿತ ಕಟ್ಟಡದ ಭಾಗಗಳನ್ನು ಸ್ವಯಂಪ್ರೇರಿತವಾಗಿ ತೆರವುಗೊಳಿಸಿಕೊಳ್ಳುವಂತೆ ಮಹಾನಗರ ಪಾಲಿಕೆಯಿಂದ ನೋಟಿಸ್ ನೀಡಿ ಸೂಚಿಸಲಾಗಿತ್ತು. ಆದರೆ, ನೋಟಿಸ್ ನೀಡಿದರೂ ಅತಿಕ್ರಮಿತ ಭಾಗಗಳನ್ನು ತೆರವುಗೊಳಿಸದ ಹಿನ್ನೆಲೆಯಲ್ಲಿ ಪಾಲಿಕೆಯಿಂದ ತೆರವು ಕಾರ್ಯಾಚರಣೆ ನಡೆಸಲಾಯಿತು.

ನ.23ರಂದು ವಾರ್ಡ್ ಸಂಖ್ಯೆ 28ರ ಖಾದಿ ಗ್ರಾಮೋದ್ಯೋಗದಿಂದ ಅಲಿಖಾ ರೋಜಾ ಸ್ಮಾರಕದವರೆಗಿನ ಮಾರ್ಗದಲ್ಲಿ ಸಾರ್ವಜನಿಕ ರಸ್ತೆ ಹಾಗೂ ಸರ್ಕಾರಿ ಜಾಗವನ್ನು ಅತಿಕ್ರಮಿಸಿ ನಿರ್ಮಿಸಲಾಗಿದ್ದ 26 ಕಟ್ಟಡಗಳ ಅನಧಿಕೃತ ಭಾಗಗಳನ್ನು ತೆರವುಗೊಳಿಸಲಾಯಿತು. ನ.24ರಂದು ವಾರ್ಡ್ ಸಂಖ್ಯೆ 27 ಮತ್ತು 30ರ ಅಥಣಿ ಗಲ್ಲಿ, ಸಕಾಫ್ ರೋಜಾ ಹಾಗೂ ಖಾಸಗೇರಿ ಓಣಿಗಳಲ್ಲಿ ಅತಿಕ್ರಮಣ ಮಾಡಿ ನಿರ್ಮಿಸಲಾಗಿದ್ದ 53 ಕಟ್ಟಡಗಳ ಅನಧಿಕೃತ ಭಾಗಗಳನ್ನು ತೆರವುಗೊಳಿಸಲಾಯಿತು.

ಈ ಕಾರ್ಯಾಚರಣೆಯಲ್ಲಿ ಪಾಲಿಕೆಯ ಅಧೀಕ್ಷಕ ಅಭಿಯಂತರ ಇ. ತಿಮ್ಮಪ್ಪ, ವಲಯ ಆಯುಕ್ತರಾದ ಮೋಹನ ಜಾಧವ, ಎಚ್.ಎಸ್. ಚಿತ್ತರಗಿ, ಕಾರ್ಯಪಾಲಕ ಅಭಿಯಂತರರಾದ ವಿಠಲ ಹೊನ್ನಳ್ಳಿ,ಪರಿಮಳಾಚಿಮ್ಮಲಗಿಸೇರಿದಂತೆಸಹಾಯಕ ಕಾರ್ಯಪಾಲಕ ಅಭಿಯಂತರರು, ಕಂದಾಯ ಅಧಿಕಾರಿಗಳು ಹಾಗೂ ಪಾಲಿಕೆಯ ಅಧಿಕಾರಿ ಮತ್ತು ಸಿಬ್ಬಂದಿ ಭಾಗವಹಿಸಿದ್ದರು ಎಂದು ಆಯುಕ್ತ ವಿಜಯ ಮೆಕ್ಕಳಕಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

28ರಂದು ಪ್ರಸಾದ ವ್ಯವಸ್ಥೆ: 29ರಂದು ನೀಲಗಂಗಾ ದೇವಿ ಜಾತ್ರೆ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ನಗರದ ಗ್ರಾಮ ದೇವತೆ ಶ್ರೀ ನೀಲಗಂಗಾ ದೇವಿಯ ಜಾತ್ರಾ ಮಹೋತ್ಸವವು ನ. 29ರಂದು ಭಾನುವಾರ ಸಂಜೆ 5.45ಕ್ಕೆ ಶ್ರೀ ನೀಲಗಂಗಾ ಮಹಾಮನೆಯಲ್ಲಿ ಭಕ್ತಿಭಾವದಿಂದ ಜರುಗಲಿದೆ. ಜಾತ್ರಾ ಮಹೋತ್ಸವದ ಅಂಗವಾಗಿ ನ.28ರಂದು ಶನಿವಾರ ಬೆಳಗ್ಗೆ 11ರಿಂದ ಸಂಜೆ 4 ಗಂಟೆಯವರೆಗೆ ದೇವಸ್ಥಾನದ ಎದುರುಗಡೆ ಭಕ್ತರಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿದೆ. ನ.29ರಂದು ಸಂಜೆ ನಡೆಯಲಿರುವ ತಾಯಿ ಶ್ರೀ ನೀಲಗಂಗಾದೇವಿಯ ಜಾತ್ರಾ ಮಹೋತ್ಸವದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿ, ದೇವಿಯ ದರ್ಶನ ಪಡೆದು ಕೃತಾರ್ಥರಾಗಬೇಕೆಂದು ಶ್ರೀ ನೀಲಗಂಗಾದೇವಿ ದೇವಸ್ಥಾನದ ಧರ್ಮದರ್ಶಿ ಸುನೀಲಗೌಡ ಸಿದ್ದಾಮಪ್ಪಗೌಡ ಪವಾಡಿ (ದೇವರಮನಿ) ವಿನಂತಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9008893999 ಸಂಪರ್ಕಿಸಿ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಪಾನ್‌ನಿಂದ ಪ್ರತಿಭಟನೆ ಕೈಬಿಡಿ ಎಂದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ । ಖುದ್ದು ಭೇಟಿಗೆ ಆಶಾ ಕಾರ್ಯಕರ್ತೆಯರ ಪಟ್ಟು

ಅಹೋರಾತ್ರಿ ಧರಣಿ ಮುಂದುವರಿಕೆಗೆ ಕಾರ್ಯಕರ್ತೆಯರ ನಿರ್ಧಾರ!

■ ಉದಯರಶ್ಮಿ ದಿನಪತ್ರಿಕೆ

ಬೆಂಗಳೂರು: ಆಶಾ ಕಾರ್ಯಕರ್ತೆಯರ ಬೇಡಿಕೆಗಳನ್ನು ಈಡೇರಿಸುವುದಾಗಿ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಭರವಸೆ ನೀಡಿದ್ದು, ಪ್ರತಿಭಟನೆಯನ್ನು ಕೈಬಿಡಬೇಕೆಂದು ಮಂಗಳವಾರ ಮನವಿ ಮಾಡಿದ್ದಾರೆ.

ಜಪಾನ್ ಪ್ರವಾಸದಲ್ಲಿರುವ ಮುಖ್ಯಮಂತ್ರಿಯವರು, ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಕಾರ್ಯಕರ್ತೆಯರ ಮುಖಂಡರೊಂದಿಗೆ ವಿಡಿಯೋ ಕರೆ ಮೂಲಕ ಮಾತನಾಡಿದರು.


"ಆಶಾ ಕಾರ್ಯಕರ್ತೆಯರ ಬಗ್ಗೆ ವಿಶೇಷ ಕಾಳಜಿಯಿದೆ. ನಿಮ್ಮ ಸಮಸ್ಯೆಗಳನ್ನು ನಾವು ಖಂಡಿತವಾಗಿಯೂ ಪರಿಹರಿಸುತ್ತೇವೆ. ದಯವಿಟ್ಟು ಪ್ರತಿಭಟನೆಯನ್ನು ಕೈಬಿಡಿ ಎಂದು ಶಿವಕುಮಾರ್ ಹೇಳಿದ್ದಾಗಿ ಮುಖ್ಯಮಂತ್ರಿಗಳ ಕಚೇರಿ (ಅಒಜಿ) ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ. ಆದರೆ, ಮುಖ್ಯಮಂತ್ರಿಯವರು ಖುದ್ದಾಗಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಬೇಡಿಕೆಗಳನ್ನು ಈಡೇರಿಸುವ ಆದೇಶವನ್ನು ಹೊರಡಿಸುವವರೆಗೂ ಪ್ರತಿಭಟನೆಯನ್ನು ಕೊನೆಗೊಳಿಸುವುದಿಲ್ಲ ಎಂದು 'ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ' ಹೇಳಿಕೆಯಲ್ಲಿ ತಿಳಿಸಿದೆ.

ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್' (ಂಖ-ಗಖಿಗಅ) ನೇತೃತ್ವದಲ್ಲಿ ನವೆಂಬರ್ 17 ರಿಂದ ಫ್ರೀಡಂ ಪಾರ್ಕ್‌ನಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಮಂಗಳವಾರ ಎಂಟನೇ ದಿನಕ್ಕೆ ಕಾಲಿಟ್ಟಿದೆ. ತಮ್ಮ ಮಾಸಿಕ ಗೌರವಧನವನ್ನು 15,000 ರೂಪಾಯಿಗಳಿಗೆ ನಿಗದಿಪಡಿಸಬೇಕು ಮತ್ತು ಬಾಕಿ ಉಳಿದಿರುವ ಇತರ ಬೇಡಿಕೆಗಳನ್ನು ಈಡೇರಿಸಬೇಕೆಂದು ಕಾರ್ಯಕರ್ತೆಯರು ಪಟ್ಟುಹಿಡಿದಿದ್ದಾರೆ.

"ನಿಮ್ಮ ಬೇಡಿಕೆಗಳನ್ನು ಈಡೇ-ರಿಸಲಾಗುವುದು, ನನ್ನ ಮೇಲೆ ನಂಬಿಕೆ ಇಡಿ," ಎಂದುಹೇಳಿದಸಿಂಶಿವಕುಮಾರ್,ಪ್ರತಿಭಟನೆ ಕೈಬಿಡಿ ಎಂದು ಮನವಿ ಮಾಡಿದ್ದಾರೆ. ನನ್ನ ಮನವಿಯನ್ನು ಒಪ್ಪಿಕೊಂಡಿಲ್ಲ ಮತ್ತು ಉಪವಾಸ ಸತ್ಯಾಗ್ರಹವನ್ನು ಮುಂದುವ-ರಿಸಿದ್ದೀರಿ. ಇದರಿಂದ ಮಹಿಳಾ ಆಶಾ ಕಾರ್ಯಕರ್ತೆಯರಿಗೆ ತೊಂದರೆಯಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ನವೆಂಬರ್ 21 ರಂದೂ ಇದೇ ರೀತಿಯ ಮನವಿ ಮಾಡಿದ್ದ ಶಿವಕುಮಾರ್, ಸರ್ಕಾರವು ಅವರ ಬೇಡಿಕೆಗಳಿಗೆ ಸಮಗ್ರ ಮತ್ತು ಶಾಶ್ವತ ಪರಿಹಾರ ಕಂಡುಕೊಳ್ಳುವ ಬಗ್ಗೆ ಚಿಂತನೆ ನಡೆಸುತ್ತಿದೆ ಎಂದು ತಿಳಿಸಿದ್ದರು.

"ಇನ್ನೊಂದೆಡೆ, ಅಂಗನವಾಡಿ ಕಾರ್ಯಕರ್ತೆಯರು ದೆಹಲಿಗೆ ತೆರಳಲು ಸಿದ್ಧತೆ ನಡೆಸುತ್ತಿದ್ದಾರೆ. ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಹಲವು ಬೇಡಿಕೆಗಳಿವೆ. ವಿಧಾನಮಂಡಲ ಅಧಿವೇಶನದ ಸಂದರ್ಭದಲ್ಲಿ,ನಿಮ್ಮಬೇಡಿಕೆಗಳ ಬಗ್ಗೆಹಣ-ಕಾಸು ಇಲಾಖೆಯೊಂದಿಗೆ ಚರ್ಚಿಸುತ್ತೇನೆ. ಪ್ರತಿಭಟನೆಯನ್ನು ಹಿಂಪಡೆಯಬೇಕು. ನಿಮ್ಮ ಬೇಡಿಕೆಗಳನ್ನು ಈಡೇರಿಸುತ್ತೇವೆ.



ನಿಮಗೆ ಖಂಡಿತವಾಗಿಯೂ ನ್ಯಾಯ ಸಿಗಲಿದೆ," ಎಂದು ಅವರು ಭರವಸೆ ನೀಡಿದ್ದಾರೆ. ಆಶಾ ಕಾರ್ಯಕರ್ತೆಯರ ಬಗ್ಗೆ ಕಾಳಜಿ ವ್ಯಕ್ತಪಡಿಸುವ ವಿರೋಧ ಪಕ್ಷದ ನಾಯಕರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಸಿಎಂ ವಾಗ್ದಾಳಿ ನಡೆಸಿದ್ದಾರೆ.


"ಅವರು ತಮ್ಮ ರಾಜ-ಕೀಯ ಹಿತಾಸಕ್ತಿಗಳಿಗಾಗಿ ನಿಮ್ಮನ್ನು ಬಳಸಿಕೊಳ್ಳುತ್ತಾರೆ. ನಿಮ್ಮ ಸಮಸ್ಯೆಗಳಿಗೆ ನಾವು ಖಂಡಿತವಾಗಿಯೂ ಪರಿಹಾರ ಕಂಡುಕೊಳ್ಳುತ್ತೇವೆ ಎಂದು ನಾನು ನಿಮಗೆ ಭರವಸೆ ನೀಡುತ್ತೇನೆ. ವಿಧಾನಸಭೆ ಅಧಿವೇಶನದವರೆಗೂ ನನಗೆ ಸಮಯ ಕೊಡಿ. ಈ ಮಹಿಳೆಯರು ಬಿಸಿಲು, ಚಳಿ ಎನ್ನದೆ ಹಗಲಿರುಳು ಕಷ್ಟಪಡುವಂತಾಗಬಾರದು," ಎಂದು ಅವರು ಹೇಳಿದರು. ಕಾರ್ಮಿಕರ ಸಮಸ್ಯೆಗಳು ತಮಗೆ ಅರ್ಥವಾಗಿವೆ ಎಂದು ಹೇಳಿದ ಶಿವಕುಮಾರ್, ಜಪಾನ್ ಪ್ರವಾಸದಿಂದ ಹಿಂತಿರುಗಿದ ನಂತರ ಅವರನ್ನು ಭೇಟಿಯಾಗುವುದಾಗಿ ಭರವಸೆ ನೀಡಿದರು.

"ಹೆಚ್ಚುತ್ತಿರುವ ಬೆಲೆಗಳ ನಡುವೆ ನಿಮ್ಮ ನೋವು ಮತ್ತು ಸಮಸ್ಯೆಗಳನ್ನು ನಾವು ಅರ್ಥಮಾಡಿಕೊಂಡಿದ್ದೇವೆ. ಇದಕ್ಕಾಗಿಯೇ ನಾವು 'ಗ್ಯಾರಂಟಿ' ಯೋಜನೆಗಳನ್ನು ಜಾರಿಗೆ ತರಲು ನಿರ್ಧರಿಸಿದೆವು. ಆರಂಭದಲ್ಲಿ, 'ಗೃಹಲಕ್ಷ್ಮಿ' ಯೋಜನೆಯಿಂದ ಆಶಾ (ಂಖಅಂಂ) ಕಾರ್ಯಕರ್ತೆಯರನ್ನು ಹೊರಗಿಡುವ ಬಗ್ಗೆ ಚರ್ಚೆ ನಡೆದಿತ್ತು. ಆದರೆ, ನಿಮ್ಮ ಕಠಿಣ ಪರಿಶ್ರಮವನ್ನು ಪರಿಗಣಿಸಿ, ನಾವು ಈ ಯೋಜನೆಯನ್ನು ನಿಮಗೂ ವಿಸ್ತರಿಸಿದೇವೆ. ಜಪಾನ್ ಪ್ರವಾಸದಿಂದ ಹಿಂತಿರುಗಿದ ನಂತರ ನಿಮ್ಮನ್ನು ಭೇಟಿಯಾಗುತ್ತೇನೆ ಎಂದು ಸಿಎಂ ಭರವಸೆ ನೀಡಿದ್ದಾರೆ.

ತಮಿಳುನಾಡಿನ ತಿರುವೂರಿನ ಕೇಂದ್ರಿಯ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ನಾಗರಾಜ ವಾಯ್. ಅಭಿಮತ

ಖೋ-ಖೋ ಕಾರ್ಯಾಗಾರ ಆಯೋಜನೆಯಲ್ಲಿ ಅಕ್ಕಮಹಾದೇವಿ ವಿವಿ ಮಾದರಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ವಿದ್ಯಾರ್ಥಿನಿಯರಲ್ಲಿ ಕ್ರೀಡೆಗಳ ಕು-ರಿತ ಜ್ಞಾನ ಮತ್ತು ಕೌಶಲ್ಯಗಳನ್ನು ವೃದ್ಧಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು ಕಾರ್ಯಾಗಾರಗಳನ್ನು ಆಯೋಜಿಸುತ್ತಿರುವುದು ಇತರ ವಿಶ್ವವಿದ್ಯಾಲಯಗಳಿಗೆ ಮಾದರಿಯಾಗಿದೆ ಎಂದು ತಮಿಳುನಾಡಿನ ತಿರುವೂರಿನ ಕೇಂದ್ರಿಯ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ನಾಗರಾಜ ವಾಯ್. ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ನಿರ್ದೇಶನಾಲಯ ಹಾಗೂ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಸಹಯೋಗದಲ್ಲಿ ನ. 23 ರಿಂದ 26ರವರೆಗೆ ಹಮ್ಮಿಕೊಂಡಿದ್ದ ಖೋ-ಖೋ ಕ್ರೀಡೆಯ ಕುರಿತು ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಕ್ರೀಡೆಗಳ ಕುರಿತು ಇಂತಹ ಕಾರ್ಯಾಗಾರಗಳನ್ನು ಆಯೋಜಿಸುವುದು ವಿರಳವಾಗಿದೆ. ಆದರೆ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯವು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ವಿದ್ಯಾರ್ಥಿನಿಯರಿಗೆ ಹೊಸ ಜ್ಞಾನ ಮತ್ತು ಕೌಶಲ್ಯಗಳನ್ನು ಪರಿಚಯಿಸುತ್ತಿದೆ. ತಮಿಳುನಾಡಿನಲ್ಲಿ ದೈಹಿಕ ಶಿಕ್ಷಣ ಕ್ಷೇತ್ರ ಎಷ್ಟು ಪ್ರಗತಿ ಸಾಧಿಸಿದೆಯೋ, ಅಷ್ಟೇ ಶ್ರೇಷ್ಠವಾಗಿ ಈ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗವೂ ಕಾರ್ಯನಿರ್ವಹಿಸುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ, ಹರಿಹರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಡಾ. ಚಂದ್ರಶೇಖರ ಮಾತನಾಡಿ, ಖೋ-ಖೋ ಕ್ರೀಡೆಯ ಇತಿಹಾಸ, ಬೆಳವಣಿಗೆ, ಪ್ರಸ್ತುತ ಕ್ರೀಡೆಯಲ್ಲಿ ಆಗಿರುವ ಬದಲಾವಣೆಗಳು, ನಿಯಮಗಳು ಹಾಗೂ ಅಂಕಣದ ಮಹತ್ವದ ಕುರಿತು ವಿದ್ಯಾರ್ಥಿನಿಯರಿಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ದೈಹಿಕ ಶಿಕ್ಷಣ ಅಧ್ಯಯನ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಹನುಮಂತಯ್ಯ ಪೂಜಾರಿ ಮಾತನಾಡಿ, ಇಂತಹ ಕಾರ್ಯಾಗಾರಗಳು ವಿದ್ಯಾರ್ಥಿನಿಯರ ಜ್ಞಾನವನ್ನು ವೃದ್ಧಿಸುವುದರ ಜೊತೆಗೆ ಉನ್ನತ ಗುರಿಗಳನ್ನು ಸಾಧಿಸಲು ಸಹಕಾರಿಯಾಗುತ್ತವೆ. ಇದರಿಂದ ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಕ್ರೀಡಾ ಚಟುವಟಿಕೆಗಳಿಗೂ ಉತ್ತೇಜನ ದೊರೆಯಲಿದೆ ಎಂದರು.

ವಿದ್ಯಾರ್ಥಿ ಕ್ಷೇಮಪಾಲನ ನಿರ್ದೇಶನಾಲಯದ ನಿರ್ದೇಶಕಿ ಪ್ರೊ. ಜ್ಯೋತಿ ಉಪಾಧ್ಯೆ ಮಾತನಾಡಿ, ಇಂತಹ ಕಾರ್ಯಾಗಾರಗಳಲ್ಲಿ ದೊರೆಯುವ ಜ್

ನ.26 ರಂದು ಸಂವಿಧಾನ ದಿನಾಚರಣೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಹಯೋಗದಲ್ಲಿ ಸಂವಿಧಾನ ದಿನಾಚರಣೆಯನ್ನು ನ.26 ರಂದು ಬೆಳಿಗ್ಗೆ 10:30 ಗಂಟೆಗೆ ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಅಂದು ಕಾರ್ಯಕ್ರಮವನ್ನು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಎಂ.ಬಿ.ಪಾಟೀಲ ಅವರು ಉದ್ಘಾಟಿಸುವರು. ನಗರ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ರಂಜಾನ್ ದರ್ಗಾ ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರ ಪ್ರಕಟಣೆ ತಿಳಿಸಿದೆ.



ಆಳಂದದಲ್ಲಿ ಸುರಕ್ಷಿತ ಬಾಲ ಅಭಿಯಾನಕ್ಕೆ ನ್ಯಾಯಾಧೀಶೆ ಚಿತ್ತರಗಿ ಚಾಲನೆ

ಆಳಂದ: ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವ ಉದ್ದೇಶದಿಂದ ಜಾರಿಗೆ ಬಂದಿರುವ 2012ರ ಪೋಕ್ಸೋ ಕಾಯ್ದೆ ಮಕ್ಕಳ ರಕ್ಷಣೆಗೆ ಪರಿಣಾಮಕಾರಿ ಕಾನೂನು ಅಸ್ತ್ರವಾಗಿದೆ. ಮಕ್ಕಳ ಸುರಕ್ಷತೆ, ಹಕ್ಕುಗಳ ರಕ್ಷಣೆ ಹಾಗೂ ಅವರ ಮೇಲೆ ನಡೆಯುವ ದೌರ್ಜನ್ಯಗಳ ವಿರುದ್ಧ ಸಮಾಜದಲ್ಲಿ ಜಾಗೃತಿ ಮೂಡಿಸುವುದು ಪ್ರತಿಯೊಬ್ಬರ ಹೊಣೆ ಗಾರಿಕೆಯಾಗಿದೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶೆ ಕುಮಾರಿ ಸುಮನ್ ಚಿತ್ತರಗಿ ಹೇಳಿದರು.

ಪಟ್ಟಣದ ಶಿಕ್ಷಣ ಇಲಾಖೆಯ ಬಿಆರ್‌ಸಿ ಕಚೇರಿಯಲ್ಲಿ ಸೋಮವಾರ ತಾಲೂಕು ಕಾನೂನು ಸೇವಾ ಸಮಿತಿ, ನ್ಯಾಯವಾದಿಗಳ ಸಂಘ, ಶಿಕ್ಷಣ ಇಲಾಖೆ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 'ಸುರಕ್ಷಿತ ಬಾಲ ಅಭಿಯಾನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯಗಳು ಅವರ ಮಾನಸಿಕ ಹಾಗೂ ದೈಹಿಕ ಬೆಳವಣಿಗೆಯ ಮೇಲೆ ಗಂಭೀರ ಪರಿಣಾಮ ಬೀರುತ್ತವೆ. ಇಂತಹ ಘಟನೆಗಳನ್ನು ತಡೆಗಟ್ಟಲು ಮಕ್ಕಳಿಗೆ ಸುರಕ್ಷತೆಯ ಅರಿವು ಮೂಡಿಸುವುದರ ಜತೆಗೆ ಪೋಷಕರು, ಶಿಕ್ಷಕರು ಹಾಗೂ ಸಮಾಜದ ಪ್ರತಿಯೊಬ್ಬರೂ ಜಾಗರೂಕರಾಗಿರಬೇಕು. ಮಕ್ಕಳಿಗೆ ಯಾವುದೇ ರೀತಿಯ ಕಿರುಕುಳ ಅಥವಾ ದೌರ್ಜನ್ಯ ಎದುರಾದರೆ ಅದನ್ನು ಮುಚ್ಚಿಡದೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡುವ ಮನೋಭಾವ ಬೆಳೆಸಬೇಕು. ಮಕ್ಕಳ ರಕ್ಷಣೆಗೆ ಕಾನೂನು ಅರಿವು ಮತ್ತು ಸಾಮಾಜಿಕ ಜಾಗೃತಿ ಅತ್ಯಂತ ಅಗತ್ಯವಾಗಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಗೋವರ್ಧನ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಾಲೆಗಳಲ್ಲಿ ಮಕ್ಕಳಿಗೆ ಶಿಕ್ಷಣ ನೀಡುವುದರ ಜತೆಗೆ ಅವರ ಸುರಕ್ಷತೆ ಮತ್ತು ಮಾನಸಿಕ ಆರೋಗ್ಯದ ಕಡೆಗೂ ಹೆಚ್ಚಿನ ಗಮನ ಹರಿಸಬೇಕು. ಮಕ್ಕಳಿಗೆ ತಮ್ಮ ಹಕ್ಕುಗಳು, ಸುರಕ್ಷಿತ ಹಾಗೂ ಅಸುರಕ್ಷಿತ ಸ್ಪರ್ಶದ ಕುರಿತು ತಿಳುವಳಿಕೆ ನೀಡಬೇಕು. ಶಿಕ್ಷಕರು ಮಕ್ಕಳೊಂದಿಗೆ ಆತ್ಮೀಯವಾಗಿ ಬೆರೆತು ಅವರ ಸಮಸ್ಯೆಗಳನ್ನು ಆಲಿಸುವ ಮೂಲಕ ಯಾವುದೇ ಅನಾಹುತ ಸಂಭವಿಸುವ ಮುನ್ನ ಮುನ್ನೆಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ಹಿರಿಯ ಪತ್ರಕರ್ತ ಮಹಾದೇವ ವಡಗಾಂವ ಮಾತನಾಡಿ, ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಸಮಾಜದ ಪ್ರತಿಯೊಂದು ಕ್ಷೇತ್ರದ ವ್ಯಕ್ತಿಗಳು ತಮ್ಮ ಜವಾಬ್ದಾರಿಯ ಗಡಿಯನ್ನು ಮೀರಿ ಜನಪರ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಮಕ್ಕಳ ಸುರಕ್ಷತೆ ಕೇವಲ ಶಿಕ್ಷಣ ಇಲಾಖೆ ಅಥವಾ ಕಾನೂನು ವ್ಯವಸ್ಥೆಯ ಜವಾಬ್ದಾರಿಯಲ್ಲ. ಪೋಷಕರು, ಶಿಕ್ಷಕರು, ವಕೀಲರು, ಜನಪ್ರತಿನಿಧಿಗಳು, ಧಾರ್ಮಿಕ ಮುಖಂಡರು ಸೇರಿ ಸಾರ್ವಜನಿಕರು, ಮಾಧ್ಯಮಗಳು ಹಾಗೂ ವಿವಿಧ ಸಂಘಟನೆಗಳು ಒಗ್ಗೂಡಿ ಮಕ್ಕಳ ರಕ್ಷಣೆಯ ಕುರಿತು ಪ್ರಾಯೋಗಿಕ ಜಾಗೃತಿ ಕಾರ್ಯಗಳನ್ನು ಕೈಗೊಳ್ಳಬೇಕು. ಮಕ್ಕಳಿಗೆ ಸುರಕ್ಷಿತ ವಾತಾವರಣ ಕಲ್ಪಿಸುವ ಮೂಲಕ ಭವಿಷ್ಯದ ಸಮಾಜವನ್ನು ಸದೃಢಗೊಳಿಸಬೇಕು ಎಂದು ಹೇಳಿದರು.

ಜೆಎಂಎಫ್‌ಸಿ ಹೆಚ್ಚುವರಿ ನ್ಯಾಯಾಧೀಶ ಪ್ರವೀಣ ಕಮ್ಮಾರ, ಸಮನ್ವಯಾಧಿಕಾರಿ ಅಣ್ಣಪ್ಪ ಹಾದಿಮನಿ, ನ್ಯಾಯವಾದಿಗಳ ಸಂಘದ ಕಾರ್ಯದರ್ಶಿ ಬಲಭೀಮ ಸಿಂಧೆ, ಸರ್ಕಾರಿ ವಕೀಲ ಇಸ್ಮಾಯಿಲ್ ಪಟೇಲ್ ಹಾಗೂ ಜ್ಯೋತಿ ವಿ. ಬಂಧಿ ಉಪಸ್ಥಿತರಿದ್ದರು.

ನ್ಯಾಯವಾದಿ ಎಂ.ವಿ. ಏಕಬೋಟೆ ಅವರು 2012ರ ಪೋಕ್ಸೋ ಕಾಯ್ದೆಯ ಪ್ರಮುಖ ಅಂಶಗಳು, ಕಾಯ್ದೆಯಡಿ ಶಿಕ್ಷೆಯ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಶಿಕ್ಷಣ ಇಲಾಖೆಯ ಬಿಆರ್‌ಪಿಗಳು, ನ್ಯಾಯವಾದಿಗಳು ಹಾಗೂ ಶಿಕ್ಷಣ ಇಲಾಖೆಯ ಸಿಬ್ಬಂದಿ ಭಾಗವಹಿಸಿದ್ದರು. ಬಿಆರ್‌ಪಿ ಸಿದ್ಧರಾಮ ಶಹಾಪೂರೆ ಕಾರ್ಯಕ್ರಮ ನಿರೂಪಿಸಿದರು. ಬಿಆರ್‌ಪಿ ದಿನೇಶ ರೆಡ್ಡಿ ವಂದಿಸಿದರು.



ಲೇಖಕ ರವಿ ಹಂಜ್ ವಿರುದ್ಧ ಆಳಂದ ಠಾಣೆಯಲ್ಲಿ ಮತ್ತೊಂದು ದೂರು

ಆಳಂದ: ಬಸವಣ್ಣನವರ ಕುರಿತು ಅವಹೇಳನಕಾರಿ ಹೇಳಿಕೆ ಮತ್ತು ಬರಹಗಳನ್ನು ಪ್ರಕಟಿಸಿದ್ದಾರೆ ಎಂದು ಆರೋಪಿಸಿ, ಲೇಖಕ ರವಿ ಹಂಜ್ ವಿರುದ್ಧ ಆಳಂದ ಪೊಲೀಸ್ ಠಾಣೆಯಲ್ಲಿ ಜಗಜ್ಯೋತಿ ಬಸವ ಅಭಿಮಾನಿಗಳ ಬಳಗ ಭಾನುವಾರ ದೂರು ಸಲ್ಲಿಸಿದೆ.

ಎರಡ್ಮೂರು ದಿನಗಳ ಮೊದಲು ಕೋರಣೇಶ್ವರ ಸ್ವಾಮೀಜಿ ಆಳಂದ ಠಾಣೆಗೆ ನೀಡಿದ ದೂರಿನ ಬೆನ್ನಲ್ಲೆ ಭಾನುವಾರ ಜಗಜ್ಯೋತಿ ಬಸವಾಭಿಮಾನಿಗಳ ನೇತೃತ್ವದಲ್ಲಿ ವಕೀಲ ಮಹಾದೇವ ಎಸ್. ಹತ್ತಿ ಅವರು ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಅವರಿಗೆ ಲಿಖಿತ ದೂರು ನೀಡಿದ್ದಾರೆ.

ಕಳೆದ ಒಂದು ವಾರದಿಂದ ಸಾಮಾಜಿಕ ಜಾಲತಾಣಗಳಲ್ಲಿ ಲೇಖಕ ರವಿ ಹಂಜ್ ಅವರು ಬಸವಣ್ಣನವರ ಬಗ್ಗೆ ಹಗುರವಾಗಿ ಹೇಳಿಕೆಗಳನ್ನು ನೀಡುತ್ತಿದ್ದಾರೆ ಮತ್ತು ಅವಹೇಳನಕಾರಿ ಲೇಖನಗಳನ್ನು ಪ್ರಕಟಿಸುತ್ತಿದ್ದಾರೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ. ಬಸವಣ್ಣನವರು ಬಿಜ್ಜಳನ ಖಜಾನೆಯನ್ನು ದುರ್ಬಳಕೆ ಮಾಡಿಕೊಂಡರು ಹಾಗೂ ಬಿಜ್ಜಳನ ಕೊಲೆಗೆ ಕಾರಣರಾದರು ಎಂದು ಆಧಾರರಹಿತವಾಗಿ ಹೇಳಲಾಗಿದೆ. ಇದಕ್ಕಾಗಿ 'ಬಸವ ಮಂಟಪ' ಎಂಬ ಕೃತಿಯನ್ನು ಬಳಸಲಾಗಿದೆ ಆದರೆ ರಹಿತವಾಗಿ ಇಂತಹ ಹೇಳಿಕೆಗಳು ಆಳಂದ ಸೇರಿದಂತೆ ರಾಜ್ಯದ ಬಸವ ಅಭಿಮಾನಿಗಳ ಭಾವನೆಗೆ ಧಕ್ಕೆ ತಂದಿವೆ ಎಂದಿದ್ದಾರೆ.

ಸುಳ್ಳು, ತಿರುಚಿದ ಮತ್ತು ಸಾಕ್ಷ್ಯರಹಿತ ಬರಹಗಳ ಮೂಲಕ ಸಾಮಾಜಿಕ ಸಾಮರಸ್ಯ ಕೆಡಿಸಲು ಮತ್ತು ಸಮಾಜದಲ್ಲಿ ಅಶಾಂತಿ ಸೃಷ್ಟಿಸಲು ಯತ್ನ ನಡೆದಿದೆ ಎಂದು ಅವರು ಆರೋಪಿಸಿದ್ದಾರೆ. ಈ ಹೇಳಿಕೆಗಳು ಧಾರ್ಮಿಕ ಆಂತರಿಕ ವಿಷಯಗಳನ್ನು ವಿಷಯಾಂತರಗೊಳಿಸಿ, ವಿವಿಧ ಧರ್ಮ ಮತ್ತು ಸಮಾಜಗಳ ನಡುವೆ ದ್ವೇಷ ಹುಟ್ಟಿಸಲು ಕಾರಣವಾಗಬಹುದು ಎಂಬ ಆತಂಕವನ್ನೂ ವ್ಯಕ್ತಪಡಿಸಿದ್ದಾರೆ.

ರಾಜ್ಯದ ಹಲವೆಡೆ ದೂರು, ಪ್ರಕರಣ ದಾಖಲು: ಈ ವಿಷಯದಲ್ಲಿ ರಾಜ್ಯದಾದ್ಯಂತ ಬಸವ ಅಭಿಮಾನಿಗಳು ದೂರು ಸಲ್ಲಿಸಿದ್ದಾರೆ. ರವಿ ಹಂಜಿ ಅವರ ಮೇಲೆ ಈಗಾಗಲೇ ಹಲವೆಡೆ ಪ್ರಕರಣಗಳು ದಾಖಲಾಗಿವೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. 'ಬಸವ ಮಂಟಪ' ಕೃತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದೆ ಎಂದೂ ದೂರಿನಲ್ಲಿ ಹೇಳಲಾಗಿದೆ. ಸಾಮಾಜಿಕ ಸಾಮರಸ್ಯ ಹಾಳುಮಾಡಲು ಯತ್ನಿಸುವವರನ್ನು ಹಗುರವಾಗಿ ಪರಿಗಣಿಸಿ ಬಿಟ್ಟರೆ, ಅವರು ಮತ್ತೆ ಅದೇ ಕೃತ್ಯಗಳನ್ನು ಮುಂದುವರಿಸುವ ಸಾಧ್ಯತೆ ಇದೆ ಎಂದು ದೂರುದಾರರು ಎಚ್ಚರಿಸಿದ್ದಾರೆ.

ರವಿ ಹಂಜ್ ಮತ್ತು ಅವರಿಗೆ ಸಹಕರಿಸುತ್ತಿರುವ ವಿಶ್ವೇಶ್ವರ ಭಟ್ ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಮತ್ತು ದ್ವೇಷ ಭಾಷಣ ತಡೆ ಕಾಯ್ದೆಯಡಿ ಕಾನೂನುನಾತ್ಮಕ ಕ್ರಮ ಕೈಗೊಳ್ಳಬೇಕು ಹಾಗೂ ಕಠಿಣ ಕ್ರಮ ಜರುಗಿಸಬೇಕು ಎಂದು ಆಳಂದದ ಬಸವ ಅಭಿಮಾನಿಗಳು ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ್ ಮಹಾಸಭಾ ತಾಲೂಕು ಉಪಾಧ್ಯಕ್ಷ ಶ್ರೀಶೈಲ್ ಖಜೂರಿ, ನ್ಯಾಯವಾದಿ ಮಹಾದೇವ ಹತ್ತಿ, ಹಿರಿಯ ಮುಖಂಡ ಮಲ್ಲಪ್ಪ ಹತ್ತರಕಿ, ಸಿದ್ಧು ಹಿರೋಳಿ, ಬಸವ ಸೇನೆ ಸಂಸ್ಥಾಪಕ ಅಧ್ಯಕ್ಷ ಲಿಂಗರಾಜ್ ಎಂ. ಪಾಟೀಲ್, ಮಹೇಶ್ ಗೌಳಿ, ಸೇರಿದಂತೆ ಪಕ್ಷಭೇದ ಮರೆತು ಅನೇಕರು ಉಪಸ್ಥಿತರಿದ್ದರು.

ಚಿಮಣಿಯಿಂದ ಹೊರಬರುತ್ತಿರುವ ಕಪ್ಪು ಕಣಗಳಿಂದ ಆರೋಗ್ಯ, ಕೃಷಿಗೆ ಆತಂಕ । ತ್ಯಾಜ್ಯ ನೀರಿನಿಂದ ಜೀವಸಂಕುಲದ ಆರೋಗ್ಯ & ಪರಿಸರಕ್ಕೆ ಹಾನಿ । 15 ದಿನಗಳಲ್ಲಿ ಮಾಲಿನ್ಯ ನಿಯಂತ್ರಿಸದಿದ್ದರೆ ಹೋರಾಟದ ಎಚ್ಚರಿಕೆ

ಸಕ್ಕರೆ ಕಾರ್ಖಾನೆಯ ಬೂದಿ ಕಾಟಕ್ಕೆ ಸಾರ್ವಜನಿಕರು ಹೈರಾಣ!

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಪಟ್ಟಣದಿಂದ ಕೇವಲ 3 ಕಿ.ಮೀ ಅಂತರದಲ್ಲಿರುವ ಹಾವಿನಾಳ ಶ್ರೀದತ್ ಇಂಡಿಯಾ ಸಕ್ಕರೆ ಕಾರ್ಖಾನೆಯ ಚಿಮಣಿಯಿಂದ ಕಬ್ಬಿನ ಸಿಪ್ಪೆ (ಬಗಾಸೆ) ಸುಡುವ ಸಂದರ್ಭದಲ್ಲಿ ಹೊರಬರುತ್ತಿರುವ ಕಪ್ಪು ಕಣಗಳು ಹಾಗೂ ಬೂದಿಯಿಂದ ಸುತ್ತಮುತ್ತಲಿನ ಗ್ರಾಮಸ್ಥರು ತೀವ್ರ ತೊಂದರೆ ಅನುಭವಿಸುತ್ತಿದ್ದು, ಮಾಲಿನ್ಯ ನಿಯಂತ್ರಣಕ್ಕೆ ತಕ್ಷಣ ಕ್ರಮ ಕೈಗೊಳ್ಳುವಂತೆ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕಾಧ್ಯಕ್ಷ ವಸಂತ ಭೈರಾಮಡಿ ಆಗ್ರಹಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕಾಧ್ಯಕ್ಷ ವಸಂತ ಭೈರಾಮಡಿ ಅವರು ಚಡಚಣ ಉಪತಹಶೀಲ್ದಾರ ಆರ್.ಎಸ್.ಚವ್ಹಾಣ ಅವರ ಮುಖಾಂತರ ವಿಜಯಪುರ ಜಿಲ್ಲಾಧಿಕಾರಿ ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಅವರಿಗೆ ಶನಿವಾರ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕಾಧ್ಯಕ್ಷ ವಸಂತ ಭೈರಾಮಡಿ ಮನವಿ ಪತ್ರ ಸಲ್ಲಿಸಿದರು.

ಕಾರ್ಖಾನೆಯ ಚಿಮಣಿಯಿಂದ ಹೊರಬರುವ ಕಪ್ಪು ಕಣಗಳು ಗಾಳಿಯಲ್ಲಿ ಹರಡಿ ಮನೆಗಳು, ಅಂಗಳಗಳು, ಬಟ್ಟೆಗಳು, ಆಹಾರ ಪದಾರ್ಥಗಳು ಹಾಗೂ ಕುಡಿಯುವ ನೀರಿನ ಮೇಲೆ ಬೀಳುತ್ತಿವೆ. ಮನೆಗಳನ್ನು ಸ್ವಚ್ಛಗೊಳಿಸಿದ ಕೆಲವೇ ಗಂಟೆಗಳಲ್ಲಿ ಮತ್ತೆ ಬೂದಿ ತುಂಬಿಕೊಳ್ಳುತ್ತಿದ್ದು, ಬಟ್ಟೆಗಳನ್ನು ಹೊರಗೆ ಒಣಗಿಸಲೂ ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಮಕ್ಕಳು ಮತ್ತು ವೃದ್ಧರಲ್ಲಿ ಕೆಮ್ಮು, ಉಸಿರಾಟದ ತೊಂದರೆ, ಕಣ್ಣಿನ ಉರಿ ಹಾಗೂ ಅಲರ್ಜಿಯಂತಹ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಇದಲ್ಲದೆ, ಹೊಲಗಳಲ್ಲಿನ ಬೆಳೆಗಳ ಮೇಲೆ ಬೂದಿ ಶೇಖರಣೆಯಾಗುತ್ತಿರುವುದರಿಂದ ಕೃಷಿ ಚಟುವಟಿಕೆಗಳಿಗೂ ತೊಂದರೆಯಾಗುತ್ತಿದೆ. ಶಾಲಾ ಮಕ್ಕಳ ಸಮವಸ್ತ್ರ ಹಾಗೂ ಪುಸ್ತಕಗಳ ಮೇಲೂ ಬೂದಿ ಬೀಳುತ್ತಿದೆ. ದ್ವಿಚಕ್ರ ವಾಹನಗಳಲ್ಲಿ ಸಂಚರಿಸುವಾಗ ಕಪ್ಪು ಕಣಗಳು ಕಣ್ಣುಗಳಿಗೆ ಬೀಳುತ್ತಿದ್ದು, ವಾಹನ ಸವಾರರು ಸಮಸ್ಯೆ ಎದುರಿಸುವಂತಾಗಿದೆ.

ಕಾರ್ಖಾನೆಯಿಂದ ಹೊರಬರುವ ತ್ಯಾಜ್ಯ ನೀರನ್ನು ಹಳ್ಳಕ್ಕೆ ಬಿಡಲಾಗುತ್ತಿದೆ ಎಂಬ ದೂರುಗಳಿದ್ದು, ಇದರಿಂದ ಮನುಷ್ಯರು, ಜಾನುವಾರುಗಳು ಹಾಗೂ ಪಕ್ಷಿಗಳ ಆರೋಗ್ಯ ಮತ್ತು ಪರಿಸರಕ್ಕೆ ಹಾನಿಯಾಗುವ ಆತಂಕವಿದೆ. ತ್ಯಾಜ್ಯ ನೀರನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ವಿಲೇವಾರಿ ಮಾಡುವ ವ್ಯವಸ್ಥೆ ಕಲ್ಪಿಸಬೇಕು ಎಂದು ಸಂಘ ಒತ್ತಾಯಿಸಿದೆ.

ಕಾರ್ಖಾನೆಯು ಈ ಭಾಗದ ರೈತರಿಗೆ ಉಪಯುಕ್ತವಾಗಿದ್ದು, ಅದರ ಕಾರ್ಯನಿರ್ವಹಣೆಗೆ ನಮ್ಮ ವಿರೋಧವಿಲ್ಲ. ಆದರೆ ಕೈಗಾರಿಕೆಯ ಅಭಿವೃದ್ಧಿಯ ಹೆಸರಿನಲ್ಲಿ ಜನರ ಆರೋಗ್ಯ ಮತ್ತು ಪರಿಸರ ನಿರ್ಲಕ್ಷವಾಗಬಾರದು ಎಂದು ಸಂಘ ತಿಳಿಸಿದೆ.

ಈ ಕುರಿತು ತಹಶೀಲ್ದಾರರು, ಜಿಲ್ಲಾಧಿಕಾರಿಗಳು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ, 15 ದಿನಗಳೊಳಗೆ ಸಮಸ್ಯೆ ಪರಿಹರಿಸಲು ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ಹೋರಾಟ ರೂಪಿಸಲಾಗುವುದು ಎಂದು ಎಚ್ಚರಿಸಿದೆ.

ಈ ಸಂದರ್ಭದಲ್ಲಿ ಮುಖಂಡ ಮಹಾದೇವ ಬನಸೋಡೆ,ಷಡಕ್ಷರ ಮಹಾಸ್ವಾಮಿ, ಗುರುಪಾದೇಶ್ವರ ಶಿವಾಚಾರ್ಯರು, ಮುರುಗೇಂದ್ರ ಸಿಂಪಿ, ದೇವೆಂದ್ರಪ್ಪ ಪಾಟೀಲ, ಬಾಬುಗೌಡ ಪಾಟೀಲ, ಶಿವಾಜಿ ಬಾಮಣಿ, ಸೋಮು ಬಡಿಗೇರ, ಸಿದ್ದರಾಮ ರಾವುತ, ಚಂದ್ರಶೇಖರ ಕಟ್ಟಿಮನಿ, ಜಕ್ಕಪ್ಪ ವಾಘಮೋರೆ ಸೇರಿದಂತೆ ರೈತ ಮುಖಂಡರು ಇದ್ದರು.

ಎಂ.ಪಿ.ಎಸ್ ಶಾಲೆಯ ಕಟ್ಟಡ ಕಾಮಗಾರಿ ಸ್ಥಳಾಂತರಕ್ಕೆ ವಿರೋಧ

■ ಉದಯರಶ್ಮಿ ದಿನಪತ್ರಿಕೆ



ಕೊಲ್ಹಾರ: ಪಟ್ಟಣದ ಸರ್ಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯ ಉನ್ನತೀಕರಣಕ್ಕಾಗಿ ಮಂಜೂರಾದ ಕಟ್ಟಡ ಕಾಮಗಾರಿಯನ್ನು ವಾರ್ಡ್ ನಂ. 7ರ ಬದಲು ವಾರ್ಡ್ ನಂ. 4ರ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಕೈಗೊಳ್ಳುತ್ತಿರುವುದಕ್ಕೆ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಯಮನಪ್ಪ ಸಿ. ಬಾಟಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಶಾಲಾ ಆವರಣದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಸುಮಾರು 4 ಕೋಟಿ ವೆಚ್ಚದಲ್ಲಿ ಆಧುನಿಕ ಶಿಕ್ಷಣಕ್ಕೆ ಅನುಕೂಲವಾಗುವ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಆದೇಶಿಸಿದ್ದು, ವಿಶಾಲ ಸ್ಥಳಾವಕಾಶವಿರುವ ಎಂ.ಪಿ.ಎಸ್. ಶಾಲೆಯ ಆವರಣದಲ್ಲಿಯೇ ಕಾಮಗಾರಿ ಕೈಗೊಳ್ಳಬೇಕು. ಬೇರೆಡೆ ಕಾಮಗಾರಿ ನಡೆಸಲು ಅನುಮತಿ ನೀಡಿದ ಅಧಿಕಾರಿಗಳು ಯಾರು ಎಂದು ಸ್ಪಷ್ಟಪಡಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರಿ ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಈರಣ್ಣ ಗಿಡ್ಡಪ್ಪಗೋಳ ಮಾತನಾಡಿ, ಪ್ರೌಢಶಾಲೆಗೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದ್ದು, ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ ಹಾಗೂ ಇತರ ಶೈಕ್ಷಣಿಕ ಅಗತ್ಯಗಳಿಗೆ ಜಾಗದ ಕೊರತೆಯಿದೆ. ಪ್ರಾಥಮಿಕ ಶಾಲೆಯ ಕಟ್ಟಡಗಳನ್ನು ಪ್ರೌಢಶಾಲೆಯ ಆವರಣದಲ್ಲಿ ನಿರ್ಮಿಸುವುದು ಸೂಕ್ತವಲ್ಲ. ಅಲ್ಲದೆ, ಮಕ್ಕಳಿಗೆ ದೂರದ ಶಾಲೆಗೆ ತೆರಳುವ ತೊಂದರೆಯಾಗಲಿದೆ ಎಂದರು. ಮಂಜೂರಾದ ಕಾಮಗಾರಿಯನ್ನು ಮೂಲ ಸ್ಥಳದಲ್ಲಿಯೇ ಆರಂಭಿಸಬೇಕು. ಇಲ್ಲವಾದಲ್ಲಿ ಕಾನೂನು ಹೋರಾಟ ನಡೆಸಿ ನ್ಯಾಯ ಪಡೆಯಲಾಗುವುದು ಎಂದು ಎಚ್ಚರಿಸಿದರು.

ಈ ಸಂದರ್ಭದಲ್ಲಿ ಸದಸ್ಯರಾದ ಮಲ್ಲಪ್ಪ ಗಾಣಿಗೇರ ಹಾಗೂ ಬಸಪ್ಪ ದಳವಾಯಿ ಉಪಸ್ಥಿತರಿದ್ದರು

ಪದೇಪದೇ ಚುನಾವಣೆ ನಡೆಸುವುದರಿಂದ ಸರ್ಕಾರಕ್ಕೆ ಆರ್ಥಿಕ ಹೊರೆ । ಪಕ್ಷದ ಚಿಹ್ನೆಯಡಿ ಗ್ರಾ.ಪಂ. ಚುನಾವಣೆ ನಡೆಸಲು ಒತ್ತಾಯ

ಸ್ಥಳೀಯ ಸಂಸ್ಥೆಗಳ ಚುನಾವಣೆ ಏಕಕಾಲಕ್ಕೆ ನಡೆಸಲು ಬಿಜೆಪಿ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ

ಕೊಲ್

ಆರೋಗ್ಯ ಮತ್ತು ಯೋಗಕ್ಷೇಮದ ಸಂಕೇತ

■ ಉದಯರಶ್ಮಿ ದಿನಪತ್ರಿಕೆ

ಹಾಲು ದೇಹವನ್ನು ಪೋಷಿಸುವ ಮತ್ತು ಪುಷ್ಟಿ ನೀಡುವ ಪದಾರ್ಥವಾಗಿದೆ. ಇದು ನವಜಾತ ಶಿಶುವಿನಿಂದ ಹಿಡಿದು ವಯೋವೃದ್ಧರಿಗೆ ಅತ್ಯಂತ ಅವಶ್ಯಕ ಮತ್ತು ಉಪಯುಕ್ತ ಆಹಾರವಾಗಿದೆ. ಮನುಷ್ಯನ ದೇಹದಲ್ಲಿ ಕ್ಯಾಲ್ಸಿಯಂ ಕೊರತೆಯನ್ನು ನೀಗಿಸುವಲ್ಲಿ ಹಾಲು ಅಮೂಲ್ಯವಾದ ಪಾತ್ರವನ್ನು ವಹಿಸುತ್ತದೆ. ಭಾರತವು ಅತಿ ಹೆಚ್ಚು ಹಾಲು ಉತ್ಪಾದಿಸುವ ದೇಶ. ಹಾಲು ಮನುಷ್ಯರಿಗೆ ಮಾತ್ರವಲ್ಲ ಪ್ರಾಣಿಗಳಿಗೂ ಸಹ ಸೇವಿಸುವ ಆಹಾರವಾಗಿದೆ. ಹಾಲು ಮತ್ತು ಇತರ ಹಾಲಿನ ಉತ್ಪನ್ನಗಳು ಮತ್ತು ಆರೋಗ್ಯದ ಪ್ರಾಮುಖ್ಯತೆಯನ್ನು ತಿಳಿಸಲು ಮತ್ತು ದೇಶದಲ್ಲೆಡೆ ಹಾಲಿನ ಉತ್ಪಾದನೆಯನ್ನು ಉತ್ತೇಜಿಸಲು ನವೆಂಬರ 26 ರಂದು ಪ್ರತಿವರ್ಷ ರಾಷ್ಟ್ರೀಯ ಹಾಲು ದಿನವನ್ನು ಆಚರಿಸಲಾಗುತ್ತಿದೆ.



ಈ ದಿನದ ಆಚರಣೆಯ ಉದ್ದೇಶ

ಡೈರಿ (ಹೈನುಗಾರಿಕೆ) ಉದ್ಯಮವನ್ನು ಬಲಪಡಿಸಲು ಮತ್ತು ಆ ಉದ್ಯಮಕ್ಕೆ ಸಂಬಂದಿಸಿದ ಎಲ್ಲಾ ಚಟುವಟಿಕೆಗಳ ಬಗ್ಗೆ ರಾಷ್ಟ್ರದೆಲ್ಲೆಡೆ ಗಮನ ಈ ದಿನವನ್ನು ಆಚರಿಸಲಾಗುತ್ತದೆ. ಡೈರಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಿಸಿ, ಹೈನುಗಾರಿಕೆಯ ಮೂಲಕ ರೈತರ ಬದುಕು ಬಂಗಾರವನ್ನಾಗಿಸಲು, ದೇಶದಲ್ಲಿ ಹಾಲು ಉತ್ಪಾದನೆಯಲ್ಲಿ ದೇಶವನ್ನು ಸ್ವಾವಲಂಬಿಯಾಗಿಸಲು ಮತ್ತು ಹೈನುಗಾರಿಕೆಯನ್ನು ಅಭಿವೃದ್ಧಿಪಡಿಸುವಲ್ಲಿ ಈ ದಿನದ ಆಚರಣೆಯು ಪ್ರಮುಖ ಉದ್ದೇಶವಾಗಿದೆ.

ಕ್ಷೀರ ಕ್ರಾಂತಿಯ ಹರಿಕಾರ ಡಾ. ವರ್ಗೀಸ್ ಕುರಿಯನ್ ಅವರ ಕೊಡುಗೆ ಅನನ್ಯವಾದುದು: ಹಾಲು ಉತ್ಪಾದಕ ಕೇಂದ್ರಗಳನ್ನು ಹೆಚ್ಚಿಸಿ, ದೇಶವು ಹೈನುಗಾರಿಕೆಯಲ್ಲಿ ಸ್ವಾವಲಂಬಿಯಾಗಬೇಕು ಎಂಬ ಮಹತ್ವಾಕಾಂಕ್ಷೆಯೊಂದಿಗೆ ಗ್ರಾಮೀಣ ಭಾಗದ ಜನರಿಗೆ ಹೈನುಗಾರಿಕೆ ಮತ್ತು ಕ್ಷೀರೋದ್ಯಮದಲ್ಲಿ ರೈತರು ಬದುಕು ಕಟ್ಟಿಕೊಂಡು ಆರ್ಥಿಕ ಸ್ವಾವಲಂಬನೆ ಸಾಧಿಸುತ್ತಾ ರಾಷ್ಟ್ರದ ಆರ್ಥಿಕತೆಗೆ ಪೂರಕವಾಗಲು ಕ್ಷೀರಕ್ರಾಂತಿಯ ಹರಿಕಾರ ಮತ್ತು ಪಿತಾಮಹನೆಂದೇ ಹೆಸರುವಾಸಿಯಾದ ಡಾ. ವರ್ಗೀಸ್ ಕುರಿಯನ್ ಅವರ ಜನ್ಮ ದಿನವನ್ನು ರಾಷ್ಟ್ರೀಯ ಹಾಲು ದಿನವನ್ನಾಗಿ ಇಂದು ದೇಶದೆಲ್ಲೆಡೆ ಆಚರಿಸಲಾಗುತ್ತಿದೆ. 2014 ರಲ್ಲಿ ಭಾರತದಲ್ಲಿ ಹೈನುಗಾರಿಕೆಯು ಅತಿ ದೊಡ್ಡ ಸ್ವಾವಲಂಬಿ ಉದ್ಯಮವಾಗಿ ಅಸ್ತಿತ್ವಕ್ಕೆ ಬಂದಿತು. ನವ್ಹಂಬರ 26, 2014 ರಲ್ಲಿ ಮೊಟ್ಟಮೊದಲು ರಾಷ್ಟ್ರೀಯ ಹಾಲು ದಿನವನ್ನು ಭಾರತೀಯ ಡೈರಿ ಅಸೋಸಿಯೇಷನ್ ಈ ದಿನದ ಆಚರಣೆಯನ್ನು ಪ್ರಾರಂಭಿಸಿತು. ಕೇರಳದ ಕೋಯಿಕೋಡ್‌ನ ಡಾ. ವರ್ಗೀಸ್ ಕುರಿಯನ್ ಅವರು ಕ್ಷೀರ ಕ್ರಾಂತಿಯ ಮೂಲಕ ದೇಶ ಸಬಲತೆ ಮತ್ತು ಸ್ವಾವಲಂಬನೆ ಸಾಧಿಸುವಲ್ಲಿ ಅಮೂಲ್ಯವಾದ ಕೊಡುಗೆ ನೀಡಿದ್ದಾರೆ.

ಹಾಲು ಉತ್ಪಾದಕರಿಂದ ಶೋಷಣೆ ಅನುಭವಿಸುವದನ್ನು ಕಂಡು, ಹಾಲು ಉತ್ಪಾದಕರು ಮತ್ತು ರೈತರನ್ನು ಸಹಕಾರ ಸಂಘಗಳ ಮೂಲಕ ಸಂಘಟಿಸಿ, ಗುಜರಾತ್ ರಾಜ್ಯದ ಕೈರ್ ಜಿಲ್ಲೆಯ ಆನಂದ ಎಂಬಲ್ಲಿ ಅಮುಲ್ (ಆನಂದ ಮಿಲ್ಕ್ ಯುನಿಯನ್ ಲಿಮಿಟೆಡ್) ಎಂಬ ಸ್ಥಾಪಿಸಿ ಸುಮಾರು 10 ಲಕ್ಷಕ್ಕೂ ಹೆಚ್ಚು ರೈತರ ಬದುಕನ್ನು ಹಸನಾಗಿಸಿದವರು. ಇದರಿಂದ ಗ್ರಾಮೀಣ ಹೈನುಗಾರಿಕೆ ಕ್ಷೇತ್ರವೂ ಅಭಿವೃದ್ಧಿ ಸಾಧಿಸಿತು. ಪ್ರಸ್ತುತ ದೇಶದಲ್ಲಿ ಉತ್ತರ ತುದಿಯಿಂದ ದಕ್ಷಿಣದ ತುದಿಯ ತನಕ ಟೇಸ್ಟ್ ಆಫ್ ಇಂಡಿಯಾ ಜಾಹೀರಾತು ಸ್ಲೋಗನ್ ನಿಂದ ಮನೆಮಾತಾಗಿರುವ ಅಮುಲ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದ ಮಿಲ್ಕ ಮ್ಯಾನ್ ಆಪ್ ಇಂಡಿಯಾ ಎಂಬ ಹೆಸರಿನಿಂದಲೇ ಪ್ರಸಿದ್ಧಿ ಪಡೆದ ಡಾ. ವರ್ಗೀಸ್ ಕುರಿಯನ್ ಅವರು ರಾಷ್ಟ್ರ ತುಂಬೆಲ್ಲಾ ಕ್ಷೀರೋದ್ಯಮ ಕ್ಷೇತ್ರದಲ್ಲಿ ಅಮೋಘ ಸಾಧನೆಗೈದಿದ್ದಾರೆ.



ರಾಷ್ಟ್ರದಲ್ಲಿನ ಕ್ಷೀರ ಕ್ರಾಂತಿಯ ಅಭಿವೃದ್ಧಿ

ನಾಳೆ (ನವ್ಹಂಬರ 26 ಗುರುವಾರ) 'ರಾಷ್ಟ್ರೀಯ ಹಾಲು ದಿನ' ದ ಪ್ರಯುಕ್ತ ಈ ವಿಶೇಷ ಲೇಖನ

ಇತ್ತೀಚಿನ ಅಂಕಿಅಂಶಗಳ ಪ್ರಕಾರ, ನಮ್ಮ ದೇಶವು ಸುಮಾರು 210 ಮಿಲಿಯನ್ ಟನ್ ಹಾಲು ಉತ್ಪಾದಿಸಲು ಪ್ರಾರಂಭಿಸಿದೆ. ಡೈರಿ, ಹೈನುಗಾರಿಕೆ ಮತ್ತು ಹಾಲಿನ ಉತ್ಪಾದನೆಯಲ್ಲಿ ಯಶಸ್ಸನ್ನು ಕಂಡು ಗುಜರಾತ್, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ರೈತರು ಹೈನುಗಾರಿಕೆಯಿಂದಲೇ ಬದುಕಿಗೊಂದು ಆಶ್ರಯ ಮಾಡಿಕೊಂಡಿದ್ದಾರೆ. ಹಾಲಿನ ಕೊರತೆಯಿಂದ ಬಳಲುತ್ತಿದ್ದ ಭಾರತವನ್ನು 3 ದಶಕಗಳಲ್ಲಿ ಇಡೀ ವಿಶ್ವದಲ್ಲಿಯೇ ಅತಿ ಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರವನ್ನಾಗಿಸಿದ ಶ್ರೇಯಸ್ಸು ಡಾ. ವರ್ಗೀಸ್ ಕುರಿಯನ್ ಅವರಿಗೆ ಸಲ್ಲುತ್ತದೆ. ಅವರು 1970 ರಲ್ಲಿ ಶ್ವೇತ ಕ್ರಾಂತಿಯನ್ನೇ ಪ್ರಾರಂಭಿಸಿ, ಹಾಲು ಉತ್ಪಾದನೆಯನ್ನು ಉತ್ತೇಜಿಸುವದು ಮತ್ತು ಅದಕ್ಕಾಗಿ ಜನತೆಗೆ ಬೇಕಾದ ಎಲ್ಲ ಆರ್ಥಿಕ ನೆರವನ್ನು ನೀಡುವದು ಇವರ ಸಂಕಲ್ಪವಾಗಿತ್ತು. 1965 ರಿಂದ 1998 ರವರೆಗೆ ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ದೇಶದಲ್ಲಿ ಕ್ಷೀರೋದ್ಯಮ ಮತ್ತು ಹೈನುಗಾರಿಕೆಯನ್ನು ಬಲಪಡಿಸಲು ಶ್ರಮಿಸಿದರು. ಅಪೌಷ್ಟಿಕತೆಯನ್ನು ಹೋಗಲಾಡಿಸಲು ಇವತ್ತು ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಹಾಲು ನೀಡುತ್ತಿರುವದು ಇವರ ಸಾಧನೆಗೆ ಹಿಡಿದ ಕೈಗನ್ನಡಿಯಾಗಿದೆ.

ಕೊನೆಯ ನುಡಿ

ಹಾಲು ಪ್ರಕೃತಿಯ ಪರಿಪೂರ್ಣ ಆಹಾರವಾಗಿದ್ದು, ಕ್ಯಾಲ್ಸಿಯಂ, ವಿಟಮಿನ್ ಡಿ, ಪ್ರೋಟೀನ್ ಮತ್ತು ಪೊಟ್ಯಾಶಿಯಂನಂತಹ ಅಗತ್ಯ ಪೋಷಕಾಂಶಗಳನ್ನು ಒದಗಿಸಬಲ್ಲದು. ಮಿಲ್ಕ್ ಮ್ಯಾನ್ ಎಂದೇ ಖ್ಯಾತಿ ಪಡೆದ ಡಾ. ವರ್ಗೀಸ್ ಕುರಿಯನ್ ಅವರು "ಖ ಚಿಟ ಚಿ ಒಟಞಟಚಿಟಿ, ಖ ಚಿಟ ಚಿಟಿ ಞಟಠಿಟಠಥಿಜಜ ಠಜಿ ಞಜ ಈಚಿಡಿಟಜಥಿ" ಎಂದು ಹೇಳುತ್ತಾ ಸದಾ ರೈತರಿಗೆ ವರದಾನವಾಗಬಲ್ಲ ಹೈನೋದ್ಯಮವನ್ನು ಅಭಿವೃದ್ಧಿಗೆ ಅಮೂಲ್ಯವಾದ ಪಾತ್ರವನ್ನು ನಿರ್ವಹಿಸಿದ್ದಾರೆ. ತಮ್ಮ ಸಾಮಾಜಿಕ ಉದ್ಯಮಶೀಲತೆಯ ತತ್ವ 'ಬಿಲಿಯನ್ ಲೀಟರ್ ಐಡಿಯಾ' ಮತ್ತು ಕ್ಷೀರ ಕ್ರಾಂತಿಯೊಂದಿಗೆ ಭಾರತವನ್ನು ಹೈನುಗಾರಿಕೆಯಲ್ಲಿ ವಿಶ್ವದ ಅತ್ಯಂತ ಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರವಾಗಿಸುವದರ ಮೂಲಕ ಸ್ವಾವಲಂಬಿ ಮತ್ತು ಸುಸ್ಥಿರ ಉದ್ಯಮಕ್ಕಾಗಿ ಶ್ರಮಿಸಿದ್ದಾರೆ. 'ಆಪರೇಷನ್ ಫ್ಲಡ್' ಎನ್ನುವ ಕಾರ್ಯಕ್ರಮದ ಮೂಲಕ ಜಾಗತಿಕವಾಗಿ ಗ್ರಾಮೀಣ ಜನರ ಆದಾಯ ಹೆಚ್ಚಿಸುವ ಕಾರ್ಯಕ್ರಮವನ್ನಾಗಿ ರೂಪಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅದಕ್ಕಾಗಿ ಈ ದಿನದ ಆಚರಣೆಯ ಮೂಲಕ ನಾವು–ನಿವೆಲ್ಲರೂ ಹಾಲಿನ ಬಳಕೆಯ ಮಹತ್ವ, ಆರೋಗ್ಯದ ಪ್ರಯೋಜನಗಳ ಬಗ್ಗೆ ಮನವರಿಕೆ ಮಾಡಿಕೊಟ್ಟು ಸಾರ್ವಜನಿಕರಿಗೆ ಸಮತೋಲಿತ ಆಹಾರಸ ಭಾಗವಾಗಿರುವ ಅದರ ಸೇವನೆಯನ್ನು ಉತ್ತೇಜಿಸಲು ಇದೊಂದು ವೇದಿಕೆಯಾಗಿದೆ. ಆದ್ದರಿಂದ ಕ್ಷೀರೋದ್ಯಮವು ಗ್ರಾಮೀಣ ಜನತೆ ಡೈರಿ ಕೃಷಿ ಪದ್ಧತಿಯನ್ನು ಉತ್ತೇಜಿಸುತ್ತಾ, ರಾಷ್ಟ್ರದ ಆರ್ಥಿಕತೆಗೆ ಪೂರಕವಾಗಿ ಸಂಪನ್ಮೂಲವನ್ನು ಒದಗಿಸುವ ರಂಗವಾಗಿ ಹೊರಹೊಮ್ಮಲಿ ಎಂಬುದೇ ನನ್ನ ಆಶಯ.





ಲೇಖನ
– ಮಲ್ಲಪ್ಪ. ಸಿ. ಖೊದ್ನಾಪೂರ (ತಿಕೋಟಾ)
ವಿಜಯಪುರ



ದೇವರಹಿಪ್ಪರಗಿಯಲ್ಲಿ ಮಹಿಳೆಯರಿಂದ ತುಳಸಿ ವಿವಾಹ

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಪಟ್ಟಣದಲ್ಲಿ ಶನಿವಾರದಿಂದ ಆರಂಭಗೊಂಡ ತುಳಸಿ ವಿವಾಹದಲ್ಲಿ ಮಹಿಳೆಯರು, ಮಕ್ಕಳು ಪಾಲ್ಗೊಂಡು ಭಕ್ತಿ, ಭಾವದೊಂದಿಗೆ ಪೂಜೆ ಸಲ್ಲಿಸಿದರು.

ಪಟ್ಟಣದ ಬಹುತೇಕ ಮನೆಗಳಲ್ಲಿ ಶನಿವಾರ ಮತ್ತು ಭಾನುವಾರಗಳುಂದು ತುಳಸಿ ವಿವಾಹ ಆಚರಿಸಲಾಯಿತು. ಅಂದು ತುಳಸಿ ಕಟ್ಟೆಯನ್ನು ಬಣ್ಣದಿಂದ ಅಲಂಕರಿಸಿ, ಮುಂದೆ ವಿವಿಧ ಬಣ್ಣಗಳ ರಂಗೋಲಿಯ ಚಿತ್ತಾರ ಬಳಿದು ಮುಂದೆ ಬಾಳೆ, ಕಬ್ಬಿನ ಗಿಡಗಳನ್ನು ಇಟ್ಟು ಗೆಜ್ಜೆವಸ್ತ್ರ, ಹೂಹಾರಗಳಿಂದ ಅಲಂಕರಿಸಲಾಗಿತ್ತು. ನಂತರ ಅರ್ಚಕ ಶ್ರೀಪಾದ ಜೋಷಿ ಶಾಸ್ತ್ರೋಕ್ತವಾಗಿ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು. ಪೂಜಾ ಕಾರ್ಯ ಕ್ರಮದ ಸೇರಿದ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯ ನಂತರ ಪನಿವಾರ, ಪ್ರಸಾದ ವಿತರಿಸಲಾಯಿತು.

ವಿಪ್ರ ಸಮುದಾಯ ಮಾತ್ರ ಆಚರಿಸುತ್ತಿದ್ದ ತುಳಸಿ ವಿವಾಹವನ್ನು ಇಂದು ಬಹುತೇಕ ಮನೆಗಳಲ್ಲಿ ತುಳಸಿ ಗಿಡವನ್ನು ಪೂಜಿಸುವುದು ಸಾಮಾನ್ಯವಾಗಿದ್ದು, ಅಂತೆಯೇ ತುಳಸಿ ವಿವಾಹವನ್ನು ಸಹ ವಿಜೃಂಭಣೆಯಿಂದ ಆಚರಿಸಲಾಯಿತು. ಇದು ದೀಪಾವಳಿ ನಂತರದಲ್ಲಿ ಮನೆ ಮಂದಿ ಸೇರಿದಂತೆ ಎಲ್ಲರೂ ಪಾಲ್ಗೊಂಡು ಸಂಭ್ರಮಿಸುವ ಸಂದರ್ಭದಂತೆ ಕಂಡು ಬಂತು. ಮಕ್ಕಳು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಈ ಸಂದರ್ಭದಲ್ಲಿ ವೆಂಕಟೇಶ ಕುಲಕರ್ಣಿ, ಶ್ರೀಪಾದಭಟ್ ಜೋಷಿ, ಶ್ರೀದೇವಿ ಜೋಷಿ, ಸಂಕೇತ ಜೋಷಿ, ಉಮಾದೇವಿ ಕುಲಕರ್ಣಿ, ರೇಖಾ ನಾಡಗೌಡ, ಸುಜಾತಾ ನಾಡಗೌಡ ಸೇರಿದಂತೆ ಮಕ್ಕಳು ಪಾಲ್ಗೊಂಡಿದ್ದರು.



ಮಾನಸಿಕ ವಿಚ್ಛೇದನ

■ ಉದಯರಶ್ಮಿ ದಿನಪತ್ರಿಕೆ

ವಿಚ್ಛೇದನ ಎಂದರೆ ಕಾನೂನಿನ ಕಾಗದದ ಮೇಲೆ ಇಬ್ಬರು ಬೇರೆಯಾಗುವುದು ಎಂದು ಸಮಾಜ ತಿಳಿದುಕೊಂಡಿದೆ. ನ್ಯಾಯಾಲಯದ ತೀರ್ಪು ಬಂದರೆ ಮಾತ್ರ ವಿಚ್ಛೇದನ ಆಯಿತು ಎಂದುಕೊಳ್ಳುತ್ತದೆ. ಆದರೆ ಕಾಗದದ ಮೇಲೆ ಬೇರೆಯಾಗದೆಯೂ ಮನಸ್ಸಿನಲ್ಲಿ ಬೇರೆಯಾಗುವ ವಿಚ್ಛೇದನವೊಂದು ಇದೆ. ಅದನ್ನೇ ಮಾನಸಿಕ ವಿಚ್ಛೇದನ ಎಂದು ಕರೆಯಬಹುದು. ಇದು ಕಣ್ಣಿಗೆ



ಕಾಣುವುದಿಲ್ಲ. ಸಮಾಜಕ್ಕೆ ಗೊತ್ತಾಗುವುದಿಲ್ಲ. ಸಂಬಂಧಿಕರಿಗೆ ಅರ್ಥವಾಗುವುದಿಲ್ಲ. ಆದರೆ ಅದನ್ನು ಅನುಭವಿಸುವವರಿಗೆ ಪ್ರತಿದಿನವೂ ಒಂದು ಸಾವಿನಂತೆ ಕಾಡುತ್ತದೆ.

ಮಾನಸಿಕ ವಿಚ್ಛೇದನ ಎಂದರೆ ಜಗಳವಲ್ಲ. ಜಗಳದಲ್ಲಿ ಕನಿಷ್ಠ ಸಂವಾದ ಇರುತ್ತದೆ. ನಿರೀಕ್ಷೆ ಇರುತ್ತದೆ. "ನೀನು ನನ್ನನ್ನು ಅರ್ಥ ಮಾಡಿಕೊಳ್ಳಬೇಕು" ಎಂಬ ಹಂಬಲ ಇರುತ್ತದೆ. ಮಾನಸಿಕ ವಿಚ್ಛೇದನದಲ್ಲಿ ಆ ಹಂಬಲವೇ ಸತ್ತುಹೋಗಿರುತ್ತದೆ. ಮಾತು ನಿಂತುಹೋಗಿರುತ್ತದೆ. ನಿರೀಕ್ಷೆ ಮುಗಿದುಹೋಗಿರುತ್ತದೆ. ಒಂದೇ ಮನೆಯಲ್ಲಿ, ಒಂದೇ ಭಾವಣಿಯ ಕೆಳಗೆ, ಒಂದೇ ಊಟದ ಮೇಜಿನ ಬಳಿ ಇಬ್ಬರು ಬದುಕುತ್ತಾರೆ. ಆದರೆ ಅವರ ಮನಸ್ಸುಗಳು ಬೇರೆ ಬೇರೆ ಲೋಕಗಳಲ್ಲಿ ಇರುತ್ತವೆ.

ಪುರುಷೋತ್ತಮ ಎಂಬ ಕಲ್ಪನೆ ನಮ್ಮ ಸಂಸ್ಕೃತಿಯಲ್ಲಿ ಬಹಳ ದೊಡ್ಡದು. ಪುರುಷೋತ್ತಮ ಎಂದರೆ ಶ್ರೀರಾಮನಂತೆ ಇರುವವನು ಎಂದಲ್ಲ. ತನ್ನ ಹೆಂಡತಿಯ ಪಾಲಿಗೆ ಉತ್ತಮನಾದವನು, ತನ್ನ ಮಕ್ಕಳ ಪಾಲಿಗೆ ಆಸರೆಯಾದವನು, ತನ್ನ ಮನೆಯ ಪಾಲಿಗೆ ಬೆಳಕಾದವನು ಎಂದರ್ಥ.

ಒಳ್ಳೆಯ ಗುಣದ ಪುರುಷನ ಮೊದಲ ಲಕ್ಷಣವೆಂದರೆ ಗೌರವ

ಅವನು ಹೆಂಡತಿಯನ್ನು ತನ್ನ ಆಸ್ತಿಯಂತೆ ನೋಡುವುದಿಲ್ಲ. ಅವಳನ್ನು ತನ್ನ ಜೊತೆಗಾರ್ತಿಯಂತೆ ನೋಡುತ್ತಾನೆ. ಅವಳ ಮಾತಿಗೆ ಕಿವಿಗೊಡುತ್ತಾನೆ. ಅವಳ ಕನಸಿಗೆ ಬೆಲೆ ಕೊಡುತ್ತಾನೆ. ಅವಳ ಸಾಧನೆಯನ್ನು ಮೆಚ್ಚುತ್ತಾನೆ. ಅವಳ ನೋವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ.

ಎರಡನೇ ಲಕ್ಷಣವೆಂದರೆ ಕಾಳಜಿ

ಪುರುಷೋತ್ತಮನ ಕಾಳಜಿ ದೊಡ್ಡ ಉಡುಗೊರೆಗಳಲ್ಲಿ ಇರುವುದಿಲ್ಲ. ದಿನನಿತ್ಯದ ಸಣ್ಣ ವಿಷಯಗಳಲ್ಲಿ ಇರುತ್ತದೆ. ಊಟ ಆಯ್ತಾ? ಎಂಬ ಒಂದೇ ಪ್ರಶ್ನೆಯಲ್ಲಿ, ಸುಸ್ತಾದಾಗ "ಸ್ವಲ್ಪ ಕೂರು" ಎಂಬ ಒಂದೇ ಮಾತಿನಲ್ಲಿ, ದಾರಿಯಲ್ಲಿ ಕೈ ಹಿಡಿಯುವ ಒಂದೇ ಸ್ಪರ್ಶದಲ್ಲಿ ಅವನ ಪ್ರೀತಿ ಕಾಣುತ್ತದೆ. ಹೆಂಡತಿ ನಕ್ಕರೆ ಅವನ ದಿನ ಸುಂದರವಾಗುತ್ತದೆ. ಹೆಂಡತಿ ಅತ್ತರೆ ಅವನ ಮನಸ್ಸು ಚಡಪಡಿಸುತ್ತದೆ. ಅವನಿಗೆ ಹೆಂಡತಿಯ ಕಣ್ಣೀರು ಕೇವಲ ನೀರಲ್ಲ. ಅದು ಒಂದು ಕರೆ.

ಮೂರನೇ ಲಕ್ಷಣವೆಂದರೆ ಜವಾಬ್ದಾರಿ

ಪುರುಷೋತ್ತಮ ದುಡ್ಡು ತಂದುಕೊಟ್ಟರೆ ಮಾತ್ರ ತನ್ನ ಕರ್ತವ್ಯ ಮುಗಿಯಿತು ಎಂದು ಭಾವಿಸುವುದಿಲ್ಲ. ಮನೆ ಎಂದರೆ ನಾಲ್ಕು ಗೋಡೆಗಳಲ್ಲ, ಮನಸ್ಸುಗಳ ಸಂಬಂಧ ಎಂದು ಅವನಿಗೆ ಗೊತ್ತು. ಮಕ್ಕಳ ಓದು, ಹೆಂಡತಿಯ ಆರೋಗ್ಯ, ಮನೆಯ ಸಣ್ಣ ಸಣ್ಣ ಅಗತ್ಯಗಳು ಅವನಿಗೂ ಮುಖ್ಯವಾಗುತ್ತವೆ. ಅವನು ಮನೆಯ ಹೊರಗೆ ಮಾತ್ರ ದುಡಿಯುವುದಿಲ್ಲ. ಮನೆಯ ಒಳಗಿನ ನೋವನ್ನು ಅರ್ಥ ಮಾಡಿಕೊಳ್ಳುತ್ತಾನೆ.

ನಾಲ್ಕನೇ ಲಕ್ಷಣವೆಂದರೆ ತಾಳ್ಮೆ

ಕೋಪ ಬಂದಾಗ ಅವನು ಮಾತನ್ನು ಆಯುಧ ಮಾಡುವುದಿಲ್ಲ. ಕೋಪದಲ್ಲಿ ಹೇಳಿದ ಒಂದು ಮಾತು ಹೆಂಡತಿಯ ಹೃದಯದಲ್ಲಿ ವರ್ಷಗಟ್ಟಲೆ ಉಳಿಯುತ್ತದೆ ಎಂದು ಅವನಿಗೆ ಗೊತ್ತು. ಆದ್ದರಿಂದ ಅವನು ಮೌನವಾಗುತ್ತಾನೆ. ಯೋಚಿಸುತ್ತಾನೆ. ಆಮೇಲೆ ಪ್ರೀತಿಯಿಂದ ಮಾತಾಡುತ್ತಾನೆ. ಅವನ ಮೌನ ಹೆದರಿಸುವ ಮೌನವಲ್ಲ. ಸಮಾಧಾನಪಡಿಸುವ ಮೌನ.

ಐದನೇ ಲಕ್ಷಣವೆಂದರೆ ನಂಬಿಕೆ

ಅವನು ಹೆಂಡತಿಯ ಮೇಲೆ ಅನುಮಾನ ಪಡುವುದಿಲ್ಲ. ಅವಳ ಸ್ನೇಹ, ಅವಳ ಬರವಣಿಗೆ, ಅವಳ ಸ್ವಾತಂತ್ರ್ಯವನ್ನು ಗೌರವಿಸುತ್ತಾನೆ. ಅವಳು ಬೆಳೆದರೆ ತಾನು ಚಿಕ್ಕವನಾಗುತ್ತೇನೆ ಎಂದು ಅವನು ಭಯಪಡುವುದಿಲ್ಲ. ಅವಳು ಬೆಳೆದರೆ ಮನೆ ಬೆಳೆಯುತ್ತದೆ ಎಂದು ಅವನು ನಂಬುತ್ತಾನೆ. ಇಂಥ ಪುರುಷನ ಜೊತೆ ಬದುಕುವುದು ಹೊರೆಯಲ್ಲ. ಹಬ್ಬ.

ಒಬ್ಬ ಹೆಣ್ಣು ಹೆಚ್ಚೇನೂ ಕೇಳುವುದಿಲ್ಲ. ದೊಡ್ಡ ಮನೆ ಬೇಡ. ದೊಡ್ಡ ದುಡ್ಡು ಬೇಡ. ಒಂದಿಷ್ಟು ಪ್ರೀತಿ ಬೇಕು. ಒಂದಿಷ್ಟು ಗೌರವ ಬೇಕು. "ನೀನು ಇದ್ದೀಯಾ, ನನಗೆ ಸಾಕು" ಎಂದು ಹೇಳುವ ಒಬ್ಬ ಮನುಷ್ಯ ಬೇಕು. ಪುರುಷೋತ್ತಮ ಎಂದರೆ ಇದನ್ನೇ ಕೊಡುವವನು. ಮಾನಸಿಕ ವಿಚ್ಛೇದನ ಎಂದರೆ ಇದನ್ನೇ ಕಳೆದುಕೊಂಡ ಸ್ಥಿತಿ.

ಆದರೆ ಎಲ್ಲಾ ಪುರುಷರು ಪುರುಷೋತ್ತಮರಾಗುವುದಿಲ್ಲ. ಕೆಲವು ಗಂಡಸರಲ್ಲಿ ಈ ಗುಣಗಳು ಇರುವುದಿಲ್ಲ. ಅವರ ಕೆಟ್ಟ ಗುಣಗಳು ಮನೆಯನ್ನೇ ನರಕ ಮಾಡುತ್ತವೆ.

ಮೊದಲ ಕೆಟ್ಟ ಗುಣವೆಂದರೆ ನಿರ್ಲಕ್ಷ್ಯ

ನಿರ್ಲಕ್ಷ್ಯ ಎಂದರೆ ಹೊಡೆಯುವುದಲ್ಲ. ಬೈಯ್ಯುವುದಲ್ಲ. ಏನೂ ಮಾಡದೇ ಇರುವುದು. ಹೆಂಡತಿಯ ಸುಸ್ತು ಕಾಣದೇ ಇರುವುದು. ಅವಳ ಕಣ್ಣೀರು ಕಾಣದೇ ಇರುವುದು. ಅವಳ ಮೌನದ ಹಿಂದಿನ ಕೂಗು ಕೇಳದೇ ಇರುವುದು. ಈ ನಿರ್ಲಕ್ಷ್ಯವೇ ಅತ್ಯಂತ ದೊಡ್ಡ ಹಿಂಸೆ.





ಏಕೆಂದರೆ ಹೊಡೆತದ ಗಾಯ ಒಣಗುತ್ತದೆ. ನಿರ್ಲಕ್ಷ್ಯದ ಗಾಯ ಒಣಗುವುದಿಲ್ಲ.

ಎರಡನೇ ಕೆಟ್ಟ ಗುಣವೆಂದರೆ ಗೌರವದ ಕೊರತೆ

ಹೆಂಡತಿಯ ಮಾತನ್ನು ಕಡೆಗಣಿಸುವುದು. ಅವಳ ಕನಸನ್ನು ಹಾಸ್ಯ ಮಾಡುವುದು. ಅವಳ ಸಾಧನೆಯನ್ನು ಗುರುತಿಸದೇ ಇರುವುದು. "ನಿನಗೆ ಇದೇ ಕೆಲಸ" ಎಂಬಂತೆ ನೋಡುವುದು. ಒಬ್ಬ ಹೆಣ್ಣಿಗೆ ಅತ್ಯಂತ ದೊಡ್ಡ ನೋವು ಎಂದರೆ ತನ್ನವರೇ ತನ್ನನ್ನು ಗುರುತಿಸದೇ ಇರುವುದು. ತನ್ನ ಮನೆಯಲ್ಲಿಯೇ ಅಪರಿಚಿತಳಾಗುವುದು.


ಮೂರನೇ ಕೆಟ್ಟ ಗುಣವೆಂದರೆ ಸಂವಾದದ ಕೊರತೆ

ಗಂಡ ಹೆಂಡತಿ ಎಂದರೆ ಇಬ್

ಎಸ್.ಎಸ್.ಎಲ್.ಸಿ. ಫಲಿತಾಂಶ ಸುಧಾರಣೆಗೆ ಚಡಚಣ ವಲಯದಲ್ಲಿ ಸಿದ್ದತೆ । 2026-27ಸಾಲಿನಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ 60+ ಗುರಿಸಾಧನೆಗೆ ಕಟ್ಟುನಿಟ್ಟಿನ ಸೂಚನೆ । ಬಿಇಓ ಹೆಚ್.ನಾಗೇಂದ್ರಪ್ಪ ವಿಶ್ವಾಸ

ಕಳೆದ ಬಾರಿ ರಾಜ್ಯಕ್ಕೆ ದ್ವಿತೀಯ; ಈ ಬಾರಿ ಪ್ರಥಮ ಸ್ಥಾನದತ್ತ ಚಿತ್ತ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ತಾಲೂಕಿನ ಬರಡೋಲ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಚಡಚಣ ವಲಯದ ಎಲ್ಲ ಸರಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢ ಶಾಲೆಗಳ ಎಲ್ಲ ವಿಷಯ ಭಾಷಾ ಶಿಕ್ಷಕರ ತರಬೇತಿ ಕಾರ್ಯಾಗಾರ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಹೆಚ್.ನಾಗೇಂದ್ರಪ್ಪ ಅವರ ಅಧ್ಯಕ್ಷತೆಯಲ್ಲಿ ಸೋಮವಾರ ಮತ್ತು ಮಂಗಳವಾರ ಎರಡು ದಿನಗಳವರೆಗೆ ನಡೆಯಿತು.

ತರಬೇತಿ ಕಾರ್ಯಾಗಾರ ಉದ್ದೇಶಿಸಿ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ನಾಗೇಂದ್ರಪ್ಪ ಅವರು ವಿಷಯ ಶಿಕ್ಷಕರಿಗೆ ಸೋಮವಾರ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದ್ದು ಮಂಗಳವಾರ ವಿಜ್ಞಾನ, ಗಣಿತ, ಸಮಾಜ ಅಧ್ಯಯನ ವಿಷಯ ಶಿಕ್ಷಕ–ರಿಗೆ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ವಿದ್ಯಾರ್ಥಿಗಳಿಗೆ ಪಾಠ ಹೇಳುವ ಮುಂಚೆ ಪೂರ್ವ ತಯಾರಿಯೊಂದಿಗೆ ಪಠ್ಯ ಪುಸ್ತಕದೊಂದಿಗೆ ಚಟುವಟಿಕೆ ಆಧಾರವಾಗಿ ಮತ್ತು ಉಪಕರಣಗಳು ಮತ್ತು ಕೌಶಲ್ಯ ಆಧಾರವಾಗಿ ಶಿಕ್ಷಕರು ಕಲಿಕಾ ಸಾಮಗ್ರಿಗಳನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ಮನ ಮುಟ್ಟುವಂತೆ ಬೋಧನೆ ಮಾಡಬೇಕು ಎಂದರು.

ಪ್ರಸಕ್ತ ಶೈಕ್ಷಣಿಕ ವರ್ಷ 2026–27 ಸಾಲಿನ ಎಸ್.ಎಸ್.ಎಲ್.ಸಿ ವಾರ್ಷಿಕ ಪರಿಕ್ಷೆಯಲ್ಲಿ 60+ ಗುರಿ ಇಟ್ಟುಕೊಂಡು ಪಾಠ ಮಾಡಿರಿ ಎಂದರು.ಪಾಠ ಮಾಡುವದಷ್ಟೆ ಅಲ್ಲ ವಿದ್ಯಾರ್ಥಿಗಳು ಹೆಚ್ಚು ಅಂಕ ಗಳಿಸಬೇಕು ಮತ್ತು ಎಸ್ಎಸ್ಎಲ್ಸಿ ಪರೀಕ್ಷೆ ಫಲಿತಾಂಶ ಸುಧಾರಣೆಗೆ ಇಲಾಖೆ ನೀಡಿರುವ 29 ಅಂಶಗಳ ಅನುಷ್ಠಾನ ಮತ್ತು ದಾಖಲಿಕರಣದ ಕುರಿತು, ಎಸ್–ಎಟಿಎಸ್ ನಲ್ಲಿ ಹಾಜರಾತಿ ದಾಖಲಾತಿ, ಎಲ್.ಬಿ.ಎ. ಆಧಾರಿತ ಘಟಕ ಪರೀಕ್ಷೆಗಳು, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಪ್ರಗತಿಗಾಗಿ ಕೈಗೊಳ್ಳಬೇಕಾದ ಅಂಶಗಳ ಕುರಿತು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಹೆಚ್.ನಾಗೇಂದ್ರಪ್ಪ ಮಾಹಿತಿ ನೀಡಿದರು,

ಕಳೆದ ವರ್ಷ 2025–26 ನೇ ಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿ ವಾರ್ಷಿಕ ಪರಿಕ್ಷೆಯಲ್ಲಿ ತಾವು 40+ ಗುರಿ ಸಾಧಿಸುವ ಮೂಲಕ ಚಡಚಣ ವಲಯ ರಾಜ್ಯದಲ್ಲಿ ಎರಡನೆ ಸ್ಥಾನ ಪಡೆದಿರುವದು ಹೆಮ್ಮೆಯ ಸಂಗತಿ. ಇದೆ ಉತ್ಸಾಹ ಹಾಗೂ ಸಕಾರಾತ್ಮಕ ಮನೋಭಾವ ಇಟ್ಟುಕೊಂಡು ಗುಣಮಟ್ಟದ ಶಿಕ್ಷಣ ಕೊಟ್ಟರೆ ನಮ್ಮ ಮುಂದಿರುವ 60+ ಗುರಿ ಸಾಧಿಸಲು ಎಲ್ಲರು ಶ್ರಮಿಸಬೇಕು. ನಮ್ಮ ನಿಮ್ಮೆಲ್ಲರ ಶ್ರಮದಿಂದ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆಯುವದು ಅಸಾಧ್ಯವೇನಲ್ಲ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರತಿ ಎರಡು ತಿಂಗಳಿಗೊಮ್ಮೆ ಪಾಲಕರ ಸಭೆ ಕರೆದು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಕುರಿತು ಚರ್ಚಿಸಬೇಕು. ಶಾಲೆಯಿಂದ ಹೊರಗುಳಿದ ವಿದ್ಯಾರ್ಥಿಗಳನ್ನು ಶಾಲೆಗೆ ಮರಳಿ ಕರೆತರಬೇಕು,ಶಿಕ್ಷಣದ ಜೊತೆಗೆ ಕ್ರೀಡೆಗೂ ಆದ್ಯತೆ ನೀಡಬೇಕು ಹಾಗೂ ವೈದ್ಯರಿಂದ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ಮಾಡಿಸಬೇಕು ಎಂದರು.

ಫಲಿತಾಂಶ ಸುಧಾರಣೆಗೆ ಇಲಾಖೆಯ ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಎಲ್ಲ ಸರಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರೌಢ ಶಾಲೆಗಳು ಕಡ್ಡಾಯವಾಗಿ ಬಳಸಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ನಾಗೆಂದ್ರಪ್ಪ ಮಾತನಾಡಿ 2026–27 ಸಾಲಿನ ಎಸ್ಎಸ್ಎಲ್ಸಿ ಫಲಿತಾಂಶ ಸುಧಾರಿಸಲು ಇಲಾಖೆಯ ನೂತನ ಯೋಜನೆಗಳಾದ ಪ್ರತಿ ಘಟಕವಾರು ಪರೀಕ್ಷೆಗಳನ್ನು ನಡೆಸಿ (ಎಲ್ಬಿಎ) ಅಂಕಗಳನ್ನು ಎಸ್ಎಟಿಎಸ್ ನಲ್ಲಿ ದಾಖಲಿಸಬೇಕು. ಇಲಾಖೆ ಅಧಿಕಾರಿಗಳು ಪ್ರತಿ ಶುಕ್ರವಾರ ಶಾಲೆಗಳಿಗೆ ಭೇಟಿ ನೀಡಿ ಕಡಿಮೆ ಫಲಿತಾಂಶ ದಾಖಲಿಸಿರುವ ಶಾಲೆಗಳ ಮೇಲೆ ವಿಶೇಷ ನಿಗಾ ವಹಿಸಲಿದ್ದಾರೆ. ಘಟಕವಾರು ಹೊಸ ನೀಲನಕ್ಷೆ ಪರೀಕ್ಷೆ–1 ಮತ್ತು 2 ರ ವೇಳಪಟ್ಟಿ ಮುಂಚಿತವಾಗಿ ಬಿಡುಗಡೆ ಮಾಡಿ ಪ್ರತಿ ತಿಂಗಳು ಪ್ರಗತಿ ಪರಿಶೀಲನಾ ಸಭೆ ನಡೆಸಬೇಕು ಎಂದು ನೋಡಲ್ ಅಧಿಕಾರಿಗಳು, ಶಿಕ್ಷಣ ಸಂಯೋಜಕರು, ಸಂಪನ್ಮೂಲ ಶಿಕ್ಷಕರಿಗೆ ತಿಳಿಸಿದರು.

ಕೆಲವು ಅನುದಾನಿತ ಮತ್ತು ಅನುದಾನರಹಿತ ಪ್ರೌಢ ಶಾಲೆಗಳ ಶಿಕ್ಷಕರು ಕಾರ್ಯಾಗಾರಕ್ಕೆ ಗೈರುಹಾಜರಾಗಿರುವುದಕ್ಕೆ ಬಿಇಓ ಅಸಮಾಧಾನ ವ್ಯಕ್ತಪಡಿಸಿರು.

ಪ್ರಾಂಶುಪಾಲ ಎಸ್.ಆಯ್.ಚನಗೊಂಡ ಮಾತನಾಡಿ ಶಿಕ್ಷಣ ಇಲಾಖೆ ರೂಪಿಸಿರುವ ಎಲ್ಲ ಯೋಜನೆಗಳನ್ನು ಶಾಲೆಗಳಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಿ 60+ ಫಲಿತಾಂಶ ಸಾಧಿಸಲು ಪ್ರಾಮಾಣಿಕವಾಗಿ ಶ್ರಮಿಸಲಿದ್ದಾರೆ ಎಂದು ಭರವಸೆ ನೀಡಿದರು.

ಕಾರ್ಯಾಗಾರದಲ್ಲಿ ಸರಕಾರಿ,ಅನುದಾನಿತ ಹಾಗೂ ಅನುದಾನರಹಿತ ಪ್ರೌಢಶಾಲೆಗಳ ಮುಖ್ಯಶಿಕ್ಷಕರು, ವಿಷಯವಾರು ಶಿಕ್ಷಕರು,ಶಿಕ್ಷಕಿಯರು ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಿದರು.

ಕೋರವಾರ ಜಿಪಂ ಚುನಾವಣೆಯಲ್ಲಿ ಸ್ಪರ್ಧೆಗೆ ಸಿದ್ಧ :ಸಂಗನಗೌಡ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ಜಿಲ್ಲಾ ಪಂಚಾಯಿತಿ ಚುನಾವಣಾ ಮೀಸಲಾತಿಯ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಕೋರವಾರ ಕ್ಷೇತ್ರದ ಸಾಮಾನ್ಯ ಮೀಸಲಾತಿಯಡಿ ಸ್ಪರ್ಧೆಗೆ ಪಕ್ಷದ ವರಿಷ್ಠರು ಅವಕಾಶ ನೀಡಿದಲ್ಲಿ ಸ್ಪರ್ಧೆಗೆ ಸಿದ್ಧ ಎಂದು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಸಂಗನಗೌಡ ಹರನಾಳ (ಯಾಳವಾರ) ಹೇಳಿದ್ದಾರೆ.

ಪಟ್ಟಣದಲ್ಲಿ ಮಂಗಳವಾರ ಪತ್ರಿಕೆಯೊಂದಿಗೆ ಮಾತನಾಡಿ, ಕಳೆದ 20 ವರ್ಷಗಳಿಂದ ಕಾಂಗ್ರೆಸ್ ಪಕ್ಷದ ಸಕ್ರೀಯ ಕಾರ್ಯಕರ್ತನಾಗಿ ಕಾರ್ಯನಿರ್ವಹಿಸಿ ಕಳೆದ ವಿಧಾನಸಭೆ ಸಹಿತ ತಾಲ್ಲೂಕು, ಜಿಲ್ಲಾ ಮತ್ತು ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಪರವಾಗಿ ಪ್ರಚಾರ ಕೈಗೊಂಡು ನಿಸ್ವಾರ್ಥ ಸೇವೆ ಸಲ್ಲಿಸಿದ್ದೇನೆ. ಯಾಳವಾರ, ಸಾತಿಹಾಳ, ಸಹಿತ ಇನ್ನಿತರ ಪಂಚಾಯಿತಿಗಳಲ್ಲಿ ಹೆಚ್ಚಿನ ಕಾಂಗ್ರೆಸ್ ಅಭ್ಯರ್ಥಿಗಳು ಆಯ್ಕೆಯಾಗುವುದರಲ್ಲಿ ಮಹತ್ತರ ಪಾತ್ರ ವಹಿಸಿದ್ದು ಈ ಬಗ್ಗೆ ಕಾಂಗ್ರೆಸ್ ಕಾರ್ಯಕರ್ತರಿಗೆ ಗೊತ್ತಿರುವ ವಿಷಯ. ಈ ಬಗ್ಗೆ ಪಕ್ಷದ ಹಿರಿಯ ನಾಯಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಎಂ.ಬಿ.ಪಾಟೀಲರು ಸಹ ನನ್ನ ಸೇವೆಯನ್ನು ತಿಳಿದು ನನ್ನನ್ನು ಉಪಾಧ್ಯಕ್ಷ ಸ್ಥಾನಕ್ಕೆ ಪರಿಗಣನೆ ಮಾಡಿರುವುದೇ ಸಾಕ್ಷಿ.

ಪಕ್ಷ ಈಗ ಅಧಿಕಾರದಲ್ಲಿರುವದರಿಂದ ನಿಸ್ವಾರ್ಥ ಸೇವೆಯನ್ನು ಪರಿಗಣಿಸುವುದು ಅತೀ ಅಗತ್ಯ. ಈ ನಿಟ್ಟಿನಲ್ಲಿ ನನ್ನ ಸೇವೆಯನ್ನು ಅರ್ಥೈಸಿಕೊಂಡು ನನಗೆ ಕೋರವಾರ ಕ್ಷೇತ್ರದಿಂದ ಸ್ಪರ್ಧಿಸಲು ಅವಕಾಶ ನೀಡಿದಲ್ಲಿ ಪಕ್ಷದ ಹಿರಿಯರ ಮಾರ್ಗದರ್ಶನದಲ್ಲಿ ಮುಂದಿನ ದಿನಗಳಲ್ಲಿ ಪಕ್ಷವನ್ನು ಬಲಾಢ್ಯವಾಗಿ ಸಂಘಟಿಸುವುದರ ಮೂಲಕ ಮುಂದಿನ ಎಲ್ಲ ಚುನಾವಣೆಗಳಲ್ಲಿ ಸಂಘಟನೆ ಹಾಗೂ ಜಯ ದೊರಕಿಸಿ ಕೊಡುವ ಕಾರ್ಯ ಮಾಡಲಾಗುವುದು ಎಂದು ವಿಶ್ವಾಸದಿಂದ ಹೇಳುತ್ತೇನೆ ಎಂದು ತಿಳಿಸಿದ್ದಾರೆ.

ಸಾಧಕ ವಿಕಲಚೇತನರ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಶ್ವ ವಿಕಲಚೇತನರ ದಿನಾಚರಣೆ ಅಂಗವಾಗಿ ವೈಯಕ್ತಿಕ, ಕ್ರೀಡೆ, ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ವಿಕಲಚೇತನರು ಮತ್ತು ವಿಕಲಚೇತನರ ಕಲ್ಯಾಣಕ್ಕಾಗಿ ಉತ್ತಮ ಸೇವೆ ಸಲ್ಲಿಸಿದ ಸಂಸ್ಥೆಗಳಿಂದ ಸನ್ಮಾನಿಸಲು ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ, ಅಗತ್ಯ ದಾಖಲೆಗಳೊಂದಿಗೆ ಎರಡು ಪ್ರತಿಗಳಲ್ಲಿ ನ.26ರೊಳಗಾಗಿ ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಕಚೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ 08352–796060 ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳು ಪ್ರಕಟಣೆ ತಿಳಿಸಿದೆ.

30 ರಂದು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಸಂದರ್ಶನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಕೃಷಿ ಮಹಾವಿದ್ಯಾಲಯ, ವಿಜಯಪುರದಲ್ಲಿ ವಿವಿಧ ವಿಷಯಗಳ 7 ಗುತ್ತಿಗೆ ಹಾಗೂ ಅರೆಕಾಲಿಕ ಸಹಾಯಕ ಪ್ರಾಧ್ಯಾಪಕರ ತಾತ್ಕಾಲಿಕ ನೇಮಕಾತಿಯನ್ನು ನಿಗದಿಪಡಿಸಲಾಗಿದೆ. 179 ದಿನಗಳ ಅವಧಿಗೆ ಮೀರದಂತೆ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ನ.30ರಂದು ಬೆಳಿಗ್ಗೆ 9 ಗಂಟೆಗೆ ಕೃಷಿ ಮಹಾವಿದ್ಯಾಲಯದ ಡೀನ್ (ಕೃಷಿ) ಅವರ ಕಚೇ–ರಿಯಲ್ಲಿ ಸಂದರ್ಶನ ನಡೆಸಲಾಗುವುದು.

ಅಂದು ಬೆಳಿಗ್ಗೆ 9 ಗಂಟೆಗೆ ಕೃಷಿ ಕೀಟಶಾಸ್ತ್ರ, 10 ಗಂಟೆಗೆ ತಳಿ ವಿಜ್ಞಾನ ಮತ್ತು ಸಸ್ಯ ತಳಿ ಅಭಿವೃದ್ಧಿ, 11 ಗಂಟೆಗೆ ಸಸ್ಯ ರೋಗಶಾಸ್ತ್ರ ಹಾಗೂ ಮಧ್ಯಾಹ್ನ 12 ಗಂಟೆಗೆ ಮಣ್ಣು ವಿಜ್ಞಾನ ವಿಷಯಗಳ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಸಂದರ್ಶನ ನಡೆಯಲಿದೆ. ಮಧ್ಯಾಹ್ನ 2 ಗಂಟೆಗೆ ಕೃಷಿ ವಿಸ್ತರಣೆ, 3 ಗಂಟೆಗೆ ಜೈವಿಕ ತಂತ್ರಜ್ಞಾನ ಹಾಗೂ ಸಂಜೆ 4 ಗಂಟೆಗೆ ಮನೋವಿಜ್ಞಾನ, ಗ್ರಾಮೀಣ ಸಮಾಜಶಾಸ್ತ್ರ ವಿಷಯದ ಅರೆಕಾಲಿಕ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಸಂದರ್ಶನ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಕೃಷಿ ವಿಶ್ವವಿದ್ಯಾಲಯದ ಜಾಲತಾಣ ತಿತಿತಿ ಞಛಜಿಒಟಿ ಗೆ ಭೇಟಿ ನೀಡಬಹುದು ಎಂದು ಕೃಷಿ ಮಹಾವಿದ್ಯಾಲಯ ವಿದ್ಯಾ ಅಧಿಕಾರಿಗಳ ಪ್ರಕಟಣೆ ತಿಳಿಸಿದೆ.



ಗುರುಪಟ್ಟಾಧಿಕಾರ ಮಹೋತ್ಸವಕ್ಕೆ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ತಾಲೂಕಿನ ರಾಂಪುರ ಪಿ.ಎ. ಗ್ರಾಮದಲ್ಲಿ ಪರಮಪೂಜ್ಯ ಡಾ.ಪ್ರಭುಸಾರಂಗದೇವ ಶಿವಾಚಾರ್ಯರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀಮಠದ ಉತ್ತರಾಧಿಕಾರಿಗಳಾದ ಪೂಜ್ಯ ಡಾ.ವಿಶ್ವಪ್ರಭುದೇವ ಶಿವಾಚಾರ್ಯರ ಗುರುಪಟ್ಟಾಧಿಕಾರ ಮಹೋತ್ಸವಕ್ಕೆ ಗ್ರಾಮಸ್ಥರಿಗೆ ಆಹ್ವಾನ ನೀಡಲಾಯಿತು.

ಇದೇ ಸಂದರ್ಭದಲ್ಲಿ ರಾಂಪುರ ಪಿ.ಎ. ಗ್ರಾಮದ ಶ್ರೀಮಠದ ಶಿಷ್ಯಬಳಗ ಹಾಗೂ ಸದ್ಭಕ್ತರನ್ನು ಭೇಟಿಯಾದ ಶ್ರೀಮಠದ ಭಕ್ತರು, ಗುರುಪಟ್ಟಾಧಿಕಾರ ಮಹೋತ್ಸವದ ಆಮಂತ್ರಣ ನೀಡಿ ಕಾರ್ಯಕ್ರಮಕ್ಕೆ ಆಗಮಿಸುವಂತೆ ವಿನಂತಿಸಿ, ಶ್ರೀಮಠದ ಪರಂಪರೆ, ಧಾರ್ಮಿಕ ಸಂಸ್ಕೃತಿ ಹಾಗೂ ಗುರು–ಶಿಷ್ಯರ ಪವಿತ್ರ ಸಂಬಂಧವನ್ನು ಮುಂದುವರಿಸುವ ಮಹತ್ವದ ಗುರುಪಟ್ಟಾಧಿಕಾರ ಮಹೋತ್ಸವದಲ್ಲಿ ಗ್ರಾಮದ ಶಿಷ್ಯಬಳಗ ಹಾಗೂ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಆಹ್ವಾನ ನೀಡಿದರು.

ಈ ವೇಳೆ ಆರೂಢ ಶ್ರೀಮಠದ ನಿತ್ಯಾನಂದ ಮಹಾರಾಜರು, ಮಲ್ಲಯ್ಯ ಕರ್ಪೂರ್ಮಠ, ಚೆನ್ನಯ್ಯ ಸಾರಂಗಮಠ, ದಾನೇಶ ಬಮ್ಮಣ್ಣಿ ಅಮೀರಂಜನ್ ಮುಜಾವರ, ಆನಂದ ಪರಿಟ್, ಗುರು ಹಿರೇಮಠ, ರಮೇಶ್ ದೇವರನಾವದಗಿ, ಶಾಮರಾವ್ ಪರಿಟ್, ನಿಂಗಪ್ಪ ಬಿಸನಾಳ, ಅನಿಲ್ ದೊಡಮನಿ, ಈರಣ್ಣ ರುಕುಂಪುರ, ಶರಣು ಚಲವಾದಿ, ಮಹಾಂತೇಶ ಬಮ್ಮಣ್ಣಿ, ಪಕಣ್ಣ ಕರ್ಪೂರಮಠ ಸೇರಿದಂತೆ ಇತರರು ಇದ್ದರು.

ವೀರಶೈವ ಧರ್ಮದಲ್ಲಿ ದಿಟ್ಟ ನಿರ್ಧಾರಗಳಿವೆ :ಪ್ರಭು ಶ್ರೀ

■ ಉದಯರಶ್ಮಿ ದಿನಪತ್ರಿಕೆ



ದೇವರಹಿಪ್ಪರಗಿ: ವೀರಶೈವ ಧರ್ಮದಲ್ಲಿ ನಿಶ್ಚಯದ ದಿಟ್ಟ ನಿರ್ಧಾರಗಳಿವೆ ಆದ್ದರಿಂದಲೇ ಇಂದಿಗೂ ತನ್ನತನ ಉಳಿಸಿಕೊಂಡು ಬೆಳೆದು ಬಂದಿದೆ ಎಂದು ಸಿಂದಗಿ ಸಾರಂಗಮಠದ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಅಭಿಪ್ರಾಯಪಟ್ಟರು.

ಪಟ್ಟಣದ ಪಂಚಾಚಾರ್ಯ ಕಲ್ಯಾಣ ಮಂಟಪದಲ್ಲಿ ಮಂಗಳವಾರ ಜರುಗಿದ ಸಿಂದಗಿ ಸಾರಂಗಮಠದ ಗುರು ಪಟ್ಟಾಧಿಕಾರ ಹಾಗೂ ಜಗದ್ಗುರು ಪಂಚಪೀಠಾಧೀಶ್ವರರ ಅಡ್ಡಪಲ್ಲಕ್ಕಿ ಮಹೋತ್ಸವದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಪತ್ರಿಕೆ ಬಿಡುಗಡೆಗೊಳಿಸುವ ಮೂಲಕ ಆಮಂತ್ರಣ ನೀಡಿದರು. ಸುಮಾರು ಮೂವತ್ತು ವರ್ಷಗಳ ನಂತರ ಡಿ.13, 14 ರಂದು ಜರುಗುತ್ತಿರುವ ಪಂಚ ಪೀಠಾಧೀಶ್ವರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಪಟ್ಟಾಧಿಕಾರ ಕಾರ್ಯಕ್ರಮಕ್ಕೆ ಎಲ್ಲರೂ ತನು, ಮನದಿಂದ ಆಗಮಿಸಿ ಶೋಭೆ ತರಬೇಕು ಎಂದರು.

ಸಿಂದಗಿ ಪಟ್ಟಣದ ಗಣ್ಯ ವ್ಯಾಪಾರಿ ಅಶೋಕ ವಾರದ ಹಾಗೂ ನಿವೃತ್ತ ನೌಕರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಸಿ.ಕೆ.ಕುದರಿ ಮಾತನಾಡಿದರು.

ಜಡಿಮಠದ ಜಡಿಸಿದ್ಧೇಶ್ವರಶ್ರೀ ಹಾಗೂ ಅವೋಗೇಶ್ವರಧಾಮದ ಶ್ರೀ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಪಟ್ಟಣ ಪಂಚಾಯಿತಿ ಸದಸ್ಯರಾದ ಕಾಸುಗೌಡ ಬಿರಾದಾರ(ಜಲಕಟ್ಟಿ), ಶಾಂತಯ್ಯ ಜಡಿಮಠ, ಪಂಚಾಚಾರ್ಯ ಕಲ್ಯಾಣ ಮಂಟಪದ ಅಧ್ಯಕ್ಷ ಬಸಯ್ಯ ಮಲ್ಲಿಕಾರ್ಜುನಮಠ, ಡಾ.ಮಹಾಂತೇಶ ಹಿರೇಮಠ, ಡಾ.ಮಂಜುನಾಥ ಮಠ, ಎಂ.ಆರ್.ಶಿರಸಂಗಿಮಠ, ಮಲ್ಲನಗೌಡ ಪಾಟೀಲ(ಬ್ಯಾಕೊಡ), ಶ್ರೀಶೈಲ ಕಬ್ಬಿನ, ಕಾಶೀನಾಥ ಸಾಲಕ್ಕಿ, ಕೆ.ಎಸ್.ಕೋರಿ, ಉಮಾಕಾಂತ ಸೊನ್ನದ, ಬಂಡೆಪ್ಪಗೌಡ ಬಿರಾದಾರ, ಸಂಗಪ್ಪ ತಡವಲ್, ಕೆ.ಎಮ್.ನಂದಿ, ಪಿ.ಎಸ್.ಮಿಂಚನಾಳ, ಜಿ.ಎಸ್.ಬಿರಾದಾರ, ಸೋಮಶೇಖರ ಹಿರೇಮಠ, ಆನಂದ ಪರದೇಶಿಮಠ, ರಮೇಶ ಮಶಾನವರ, ಕಾಶೀನಾಥ ಹಿರೇಮಠ, ಆನಂದ ಜಡಿಮಠ , ಗಣೇಶ ಹಿರೇಮಠ, ಸಿದ್ದು ಆನಂದಿ,ಬಸವರಾಜ ಬುದ್ನಿ, ಭದ್ರಯ್ಯ ಮಲ್ಲಿಕಾರ್ಜುನಮಠ, ಅಪ್ಪೋಜಿ ದೇಸಾಯಿ, ವೀರೇಶ ಬುದ್ನಿ, ಶಿವಯ್ಯ ವಸ್ತ್ರದ ಇದ್ದರು.

ನ.26ರಿಂದ ಡಿ.01 ರವರೆಗೆ ವಿಶೇಷ ಚೇತನರ ತಾಲ್ಲೂಕು ಹಾಗೂ ಜಿಲ್ಲಾಮಟ್ಟದ ಕ್ರೀಡಾಕೂಟ ಸ್ಪರ್ಧೆಗಳು

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: 2026–27ನೇ ಸಾಲಿನ ವಿಶೇಷ ಚೇತನರ ಕ್ರೀಡಾಕೂಟ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ವಿಶೇಷ ಚೇತನರ ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ತಾಲ್ಲೂಕುಮಟ್ಟದ ವಿಶೇಷ ಚೇತನರ ಕ್ರೀಡಾಕೂಟ ಹಾಗೂ ವಿಜಯಪುರದಲ್ಲಿ ಜಿಲ್ಲಾಮಟ್ಟದ ಕ್ರೀಡಾಕೂಟವನ್ನು ಆಯೋಜಿಸಲಾಗಿದೆ.

ತಾಲ್ಲೂಕುಮಟ್ಟದ ಕ್ರೀಡಾಕೂಟಗಳು ನವೆಂಬರ್ 26ರಿಂದ 30ರವರೆಗೆ ವಿವಿಧ ತಾಲ್ಲೂಕುಗಳ ಕ್ರೀಡಾಂಗಣಗಳಲ್ಲಿ ನಡೆಯಲಿವೆ. ನವೆಂಬರ್ 26ರಂದು, ವಿಜಯಪುರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿ, ಇಂಡಿಯಲ್ಲಿ ಭಾರತ ರತ್ನ ಡಾ.ಬಿ.ಆರ್ ಅಂಬೇಡ್ಕರ್ ತಾಲ್ಲೂಕ ಕ್ರೀಡಾಂಗಣದಲ್ಲಿ, ನ.30ರಂದು ಸಿಂದಗಿಯಲ್ಲಿ ತಾಲ್ಲೂಕ ಕ್